04 September 2026 Friday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

ಭಾವನಾಂತರಂಗ

ಒಬ್ಬರನ್ನು ನೆನಪಿಸಿಕೊಳ್ಳಲು ಆ ವ್ಯಕ್ತಿಗಳು ಕಣ್ಮುಂದೆಯೇ ಇರಬೇಕೆಂದೆನಿಲ್ಲ, ಅವರಲ್ಲಿರುವ ಒಳ್ಳೆಯ ವ್ಯಕ್ತಿತ್ವ ಸಾಕು!

-ಸ್ನೇಹಾ ಆನಂದ್

info.varthaman@gmail.com

ಮಾನವ ಹಕ್ಕುಗಳ ಉಲ್ಲಂಘನೆಗೆ ಕಟ್ಟುನಿಟ್ಟಿನ ತಡೆ:ಉಷಾರಾಣಿ — ಪುಟ ಸಂ. 2

ಕೋಟೆಯಲ್ಲಿ ಜನರಲ್ಲಿ ಆತಂಕ ಮೂಡಿಸಿರುವ ಬೀದಿ ನಾಯಿಗಳು — ಪುಟ ಸಂ. 3

ಅಭಿಮನ್ಯುವಿಗೆ ನಗರದಲ್ಲಿ ಗೌರವ ಬೀಳ್ಕೊಡುಗೆಗೆ ಆಗ್ರಹ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 261 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ಕೇಂದ್ರ ಸಂಪುಟಕ್ಕೆ 'ಮೇಜರ್ ಸರ್ಜರಿ'

ಸಚಿವರ ಕಾರ್ಯಕ್ಷಮತೆ, ಪ್ರಾದೇಶಿಕ ಸಮತೋಲನ । ಹೊಸಮುಖಗಳಿಗೆ ಅವಕಾಶ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟದಲ್ಲಿ ಮತ್ತೊಂದು ಮಹತ್ವದ ಪುನರ್‌ರಚನೆ ನಡೆಯುವ ಕುರಿತು ರಾಜಕೀಯ ವಲಯದಲ್ಲಿ ಚರ್ಚೆ ತೀವ್ರಗೊಂಡಿದೆ.

ಹಲವು ರಾಜ್ಯಗಳಲ್ಲಿ ನಡೆಯಲಿರುವ ವಿಧಾನ ಸಭಾ ಚುನಾವಣೆಗಳು, ಸಚಿವರ ಕಾರ್ಯಕ್ಷಮತೆ, ಪ್ರಾದೇಶಿಕ ಸಮತೋಲನ ಹಾಗೂ ಮಿತ್ರಪಕ್ಷಗಳ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಸಂಪುಟಕ್ಕೆ ಹೊಸ ಮುಖಗಳನ್ನು ಸೇರ್ಪಡೆ ಮಾಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಕೇಂದ್ರ ಸಚಿವ ಸಂಪುಟದಲ್ಲಿ ಸುಮಾರು 69 ಸಚಿವರಿದ್ದಾರೆ. ಗರಿಷ್ಠ 81 ಸಚಿವರಿಗೆ ಅವಕಾಶವಿದೆ. ಖಾಲಿ ಇರುವ ಸ್ಥಾನಗಳಿಗೆ ಹೆಚ್ಚುವರಿ ಸಚಿವರನ್ನು ಸೇರ್ಪಡೆಗೊಳಿಸಲು ಸರ್ಕಾರಕ್ಕೆ ಅವಕಾಶವಿದೆ. ಆದರೆ, ಕೇವಲ ಖಾಲಿ ಸ್ಥಾನಗಳನ್ನು ತುಂಬುವುದಕ್ಕಿಂತ ರಾಜಕೀಯ ಮತ್ತು ಆಡಳಿತಾತ್ಮಕ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಪುನರ್‌ರಚನೆ ಮಾಡುವ ಸಾಧ್ಯತೆ ಹೆಚ್ಚಾಗಿದೆ.

ಪ್ರಸ್ತುತ ಹಲವು ಹಿರಿಯ ಸಚಿವರು ಒಂದಕ್ಕಿಂತ ಹೆಚ್ಚು ಖಾತೆಗಳನ್ನು ನಿರ್ವಹಿಸುತ್ತಿದ್ದಾರೆ. ಅಮಿತ್ ಶಾ, ಜೆ.ಪಿ. ನಡ್ಡಾ, ಶಿವರಾಜ್ ಸಿಂಗ್ ಚೌಹಾಣ್, ಮನೋಹರ್ ಲಾಲ್, ಎಚ್.ಡಿ. ಕುಮಾರಸ್ವಾಮಿ, ಅಶ್ವಿನಿ ವೈಷ್ಣವ್, ಜ್ಯೋತಿರಾದಿತ್ಯ ಸಿಂಧಿಯಾ, ಕಿರಣ್ ರಿಜಿಜು ಮತ್ತು ಮನ್ಸುಖ್ ಮಾಂಡವಿಯಾ ಸೇರಿದಂತೆ ಹಲವು ಸಚಿವರ ಬಳಿ ಒಂದಕ್ಕಿಂತ ಹೆಚ್ಚು ಜವಾಬ್ದಾರಿಗಳಿವೆ. ಹೊಸ ಸಚಿವರನ್ನು ನೇಮಿಸುವ ಮೂಲಕ ಕೆಲವು ಸಚಿವರ ಮೇಲಿರುವ ಹೆಚ್ಚುವರಿ ಹೊರೆ ಕಡಿಮೆ ಮಾಡುವ ಸಾಧ್ಯತೆ ಇದೆ.

ಬಿಜೆಪಿ ತನ್ನ ರಾಷ್ಟ್ರೀಯ ಸಂಘಟನೆಯಲ್ಲಿ ದೊಡ್ಡ ಮಟ್ಟದ ಬದಲಾವಣೆ ಮಾಡಿದೆ. ನಿತಿನ್ ನಬಿನ್ ನೇತೃತ್ವದ ಹೊಸ ರಾಷ್ಟ್ರೀಯ ತಂಡದಲ್ಲಿ 65 ಮಂದಿ ಇದ್ದು, ಅದರಲ್ಲಿ 51 ಹೊಸ ಮುಖಗಳಿಗೆ ಅವಕಾಶ ನೀಡಲಾಗಿದೆ. ಹಿರಿಯ ನಾಯಕರಿಗೆ ವಿವಿಧ ಸಂಘಟನಾ ಜವಾಬ್ದಾರಿಗಳನ್ನು ನೀಡುವುದರ ಜತೆಗೆ ಯುವ ಮುಖಗಳು ಮತ್ತು ಹೊಸ ಪೀಳಿಗೆಯ ನಾಯಕರಿಗೆ ಆದ್ಯತೆ ನೀಡಲಾಗಿದೆ.

ಈಗ ಸರ್ಕಾರದ ತಂಡದಲ್ಲೂ ಇದೇ ರೀತಿಯ ಬದಲಾವಣೆ ಸಾಧ್ಯ ಎಂಬ ಚರ್ಚೆ ನಡೆಯುತ್ತಿದೆ. 2027ರಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆ ಹಾಗೂ 2029ರ ಲೋಕಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟು ಕೊಂಡು 'ಸಂಘಟನೆ + ಸರ್ಕಾರ' ಎರಡನ್ನೂ ಚುನಾವಣೆಗೆ ಸಜ್ಜುಗೊಳಿಸುವ ತಂತ್ರದ ಭಾಗವಾಗಿರಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

ಕೆಲವು ಸಚಿವರಿಗೆ ಕೊಕ್

ಸಂಪುಟ ಪುನರ್‌ರಚನೆಯ ಸಂದರ್ಭ ಕಾರ್ಯಕ್ಷಮತೆ ಕೂಡ ಪ್ರಮುಖ ಮಾನದಂಡವಾಗಬಹುದು. ಉತ್ತಮ ಪ್ರದರ್ಶನ ನೀಡದ ಸಚಿವರನ್ನು ಕೈಬಿಡುವುದು ಮತ್ತು ಕೆಲವರ ಖಾತೆ ಬದಲಿಸುವುದು ಅಥವಾ ಸಂಘಟನಾ ಜವಾಬ್ದಾರಿಗೆ ಕಳುಹಿಸುವ ಸಾಧ್ಯತೆ ಬಗ್ಗೆ ರಾಜಕೀಯ ವಲಯದಲ್ಲಿ ಚರ್ಚೆ ಇದೆ. ಅಶ್ವಿನಿ ವೈಷ್ಣವ್ ಪ್ರಮುಖ ಐದು ಸಚಿವರಲ್ಲಿ ಒಬ್ಬರಾಗಿ ಬಡ್ತಿ ಪಡೆಯಬಹುದು. ನಿತಿನ್ ಗಡ್ಕರಿ ಖಾತೆ ಬದಲಾಗಬಹುದು. ಪ್ರಹ್ಲಾದ್ ಜೋಶಿ ಅವರಿಂದ ಶಿಕ್ಷಣ ಖಾತೆ ಮರಳಿ ಪಡೆಯಬಹುದು ಎನ್ನಲಾಗಿದೆ.

ಯುವಕರಿಗೂ ಅವಕಾಶ

ಸಂಪುಟ ಪುನರ್‌ರಚನೆಯಲ್ಲಿ ಪೀಳಿಗೆಯ ಬದಲಾವಣೆ ಪ್ರಮುಖ ಅಂಶವಾಗುವ ಸಾಧ್ಯತೆ ಇದೆ. 2024ರಲ್ಲಿ ಮೋದಿ 3.0 ಸರ್ಕಾರ ಅಧಿಕಾರಕ್ಕೆ ಬಂದಾಗ ಸಚಿವರ ಪೈಕಿ ಶೇ.65ಕ್ಕೂ ಹೆಚ್ಚು ಮಂದಿ 51 ರಿಂದ 70 ವರ್ಷದೊಳಗಿನವರಾಗಿದ್ದರು. ಸುಮಾರು ಶೇ.24ರಷ್ಟು ಮಂದಿ 31–50 ರ ವಯೋಮಾನದವರಾಗಿದ್ದರು. ಈಗ 70 ವರ್ಷ ಮೇಲ್ಪಟ್ಟ ಸಚಿವರೂ ಇದ್ದಾರೆ. ಹೀಗಾಗಿ ಅನುಭವ ಹೊಂದಿರುವ ಹಿರಿಯ ನಾಯಕರ ಜತೆಗೆ ಯುವ ಸಂಸದರಿಗೆ ಹೆಚ್ಚಿನ ಜವಾಬ್ದಾರಿ ನೀಡುವ ಚಿಂತನೆ ಇದೆ ಎನ್ನಲಾಗಿದೆ. ಮುಂದಿನ ಒಂದು ದಶಕದ ಬಿಜೆಪಿ ನಾಯಕತ್ವವನ್ನು ರೂಪಿಸುವ ಪ್ರಯತ್ನ ಇದು ಎನ್ನಲಾಗಿದೆ.

ಮಹಿಳೆಯರಿಗೆ ಪ್ರಾತಿನಿಧ್ಯ?

ಸಂಪುಟ ಪುನರ್‌ರಚನೆಯಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತೊಂದು ಪ್ರಮುಖ ಮಾನದಂಡವಾಗಬಹುದು. ಬಿಜೆಪಿ ತನ್ನ ಸಂಘಟನಾ ತಂಡದಲ್ಲಿ ಮಹಿಳೆಯರು, ಯುವಕರು ಹಾಗೂ ವಿವಿಧ ಸಾಮಾಜಿಕ ವರ್ಗಗಳಿಗೆ ಪ್ರಾತಿನಿಧ್ಯ ನೀಡುವ ಪ್ರಯತ್ನ ಮಾಡಿರುವ ಹಿನ್ನೆಲೆಯಲ್ಲಿ, ಸರ್ಕಾರದಲ್ಲೂ ಈ ಸಮತೋಲನವನ್ನು ಮತ್ತಷ್ಟು ಬಲಪಡಿಸುವ ನಿರೀಕ್ಷೆ ಇದೆ.

ಮಿತ್ರಪಕ್ಷಗಳಿಗೆ ಮತ್ತಷ್ಟು ಸ್ಥಾನ

ಮೋದಿ ಸರ್ಕಾರ ಎನ್‌ಡಿಎ ಮೈತ್ರಿಕೂಟದ ಆಧಾರದ ಮೇಲೆ ಇರುವುದರಿಂದ ಸಂಪುಟ ಪುನರ್‌ರಚನೆಯಲ್ಲಿ ಮಿತ್ರಪಕ್ಷಗಳಿಗೂ ಆದ್ಯತೆ ನೀಡಲು ಮುಂದಾಗಿದೆ ಎನ್ನಲಾಗಿದೆ. ಮಹಾರಾಷ್ಟ್ರದಲ್ಲಿ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆಗೆ ಲೋಕಸಭೆಯಲ್ಲಿ 13 ಸಂಸದರು ಇರುವ ಹಿನ್ನೆಲೆಯಲ್ಲಿ ಹೆಚ್ಚುವರಿ ಪುಟ 2ಕ್ಕೆ

ಶಾಸಕ ಸುರೇಶ್‌ಗೌಡ ಪುತ್ರಿ ನಿರೀಕ್ಷಣಾ ಜಾಮೀನು ಅರ್ಜಿ ವಜಾ

ಮಂಡ್ಯ: ಮಹಿಳಾ ಪಿಎಸ್‌ಐಗೆ ಕಪಾಳಮೋಕ್ಷ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಸಕ ಸುರೇಶ್‌ಗೌಡ ಪುತ್ರಿ ಐಶ್ವರ್ಯ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಶ್ರೀರಂಗಪಟ್ಟಣದ 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ವಜಾಗೊಳಿಸಿದೆ.

ಕಳೆದ ಆಗಸ್ಟ್ 12ರಂದು ಶ್ರೀರಂಗಪಟ್ಟಣ ತಾಲೂಕಿನ ಆರತಿ ಉಕ್ಕಡದಲ್ಲಿ ಕರ್ತವ್ಯದ ಲ್ಲಿದ್ದ ಮಹಿಳಾ ಪಿಎಸ್‌ಐ ಸವಿತಾಗೆ ಐಶ್ವರ್ಯ ಕಪಾಳಮೋಕ್ಷ ಮಾಡಿದ್ದರು. ಕ್ಯಾತನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಪುಟ 2ಕ್ಕೆ



ಉದ್ಯಾನವನ ಮಸೂದೆ ವಾಪಸ್: ಸಚಿವ ಸಂಪುಟ ಸಭೆ ನಿರ್ಧಾರ

ಬೆಂಗಳೂರು: ವ್ಯಾಪಕ ವಿರೋಧದ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರಿ ಉದ್ಯಾನಗಳು (ಸಂರಕ್ಷಣೆ) ತಿದ್ದುಪಡಿ ಮಸೂದೆಯನ್ನು ಹಿಂಪಡೆಯಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸಚಿವ ಸಂಪುಟ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ ಅವರು, ಉದ್ಯಾನಗಳ ಮಸೂದೆಯನ್ನು ಹಿಂಪಡೆಯಲು ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ. ಮಸೂದೆ ಕುರಿತು ಸಾರ್ವಜನಿಕ ಚರ್ಚೆಗೆ ಅವಕಾಶ ಕಲ್ಪಿಸಲಾಗುತ್ತದೆ. ಮುಂದಿನ ವಿಧಾನಸಭೆ ಅಧಿವೇಶನದಲ್ಲಿ ಮಸೂದೆಯನ್ನು ಹೊಸ ಸ್ವರೂಪದಲ್ಲಿ ಮತ್ತೆ ಮಂಡಿಸಲಾಗುವುದು ಎಂದು ತಿಳಿಸಿದರು.

ವಿಧಾನಸಭೆಯಲ್ಲಿ ಮಸೂದೆ ಕುರಿತು ಚರ್ಚಿಸದೆ, ಸಾರ್ವಜನಿಕರಲ್ಲಿ ರಾಜಕೀಯ ಪ್ರೇರಿತ ತಪ್ಪು ಕಲ್ಪನೆಗಳನ್ನು ಸೃಷ್ಟಿಸಲು ಬಿಜೆಪಿ ಪ್ರಯತ್ನಿಸುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಮಸೂದೆಯನ್ನು ಮರು ಪರಿಶೀಲಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದರು. ಆಗಸ್ಟ್ 24ರಂದು, ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಕಾಯ್ದೆಗೆ ತಿದ್ದುಪಡಿ ತರುವ ಪುಟ 2ಕ್ಕೆ

21ರಿಂದ ವಿಶೇಷ ಅಧಿವೇಶನ

ಬೆಂಗಳೂರು: ರಾಜ್ಯ ವಿಧಾನಮಂಡಲ ವಿಶೇಷ ಅಧಿವೇಶನವನ್ನು ಸೆ.21ರಿಂದ ಮತ್ತೆ ಮೂರು ದಿನಗಳ ಕಾಲ ನಡೆಸಲು ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಯಿತು.

ಮುಖ್ಯಮಂತ್ರಿ ಡಿಕೆ ಶಿವಕುಮಾರ್ ನೇತೃತ್ವದಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ವಿಶೇಷ ಅಧಿವೇಶನಕ್ಕೆ ಒಪ್ಪಿಗೆ ನೀಡಲಾಗಿದೆ. ಸೆಪ್ಟೆಂಬರ್ 21ರಿಂದ ಸೆಪ್ಟೆಂಬರ್ 23ರವರೆಗೆ ಪುಟ 2ಕ್ಕೆ

ಕೆಎಎಸ್ ಪರೀಕ್ಷೆಯಲ್ಲೂ ಅಕ್ರಮ?

ಬೆಂಗಳೂರು: ಕೆಪಿಎಸ್‌ಸಿ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಬಸವರಾಜ್ ಕನ್ನಾಳೆ ಮನೆ ಮೇಲೆ ದಾಳಿ ನಡೆಸಿದ ವೇಳೆ 15 ಅಭ್ಯರ್ಥಿಗಳ ಗ್ರೂಪ್ ಬಿ ಹಾಲ್ ಟಿಕೆಟ್ ಪತ್ತೆಯಾಗಿವೆ.

ಪ್ರಕರಣದ ಸಂಬಂಧ ಸಿಐಡಿ ಅಧಿಕಾರಿಗಳು, ಬಸವರಾಜ್ ಕನ್ನಾಳೆ ಮನೆಯಲ್ಲಿ ಸಿಕ್ಕ ಸಾಕ್ಷ್ಯಗಳನ್ನು ನೋಡಿ ದಂಗಾಗಿದ್ದಾರೆ. ಶೋಧದ ವೇಳೆ ಬಸವರಾಜ್ ಮನೆಯಲ್ಲಿ ಬರೋಬ್ಬರಿ 15 ಪರೀಕ್ಷೆಗಳ ಹಾಲ್ ಟಿಕೆಟ್‌ಗಳು ಪತ್ತೆಯಾಗಿವೆ. ಕೇವಲ ಪಶು ವೈದ್ಯಾಧಿಕಾರಿ ಹುದ್ದೆ ಮಾತ್ರವಲ್ಲದೆ ಗ್ರೂಪ್ ಬಿ ಹುದ್ದೆಗಳು ಹಾಗೂ ಕೆಎಎಸ್ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳೂ ಡೀಲ್ ಆಗಿರುವ ಅನುಮಾನ ಸಿಐಡಿ ಬಂದಿದೆ. ಕೆಎಎಸ್ ಪ್ರಿಲಿಮ್ಸ್, ಮೇನ್ಸ್ ಮತ್ತು ಸಂದರ್ಶನ ಹೀಗೆ ಮೂರೂ ಹಂತಗಳಿಗೆ ಒಂದೇ ಪ್ಯಾಕೇಜ್ ದರ ನಿಗದಿಪ ಡಿಸಿ ಅಕ್ರಮ ಎಸಗಿರುವ ಸಾಧ್ಯತೆಯಿದೆ. ಸದ್ಯ ಪಶು ವೈದ್ಯಾಧಿಕಾರಿ ಹುದ್ದೆಯ ಅಕ್ರಮ ತನಿಖೆ ಮುಗಿಯುತ್ತಿದ್ದಂತೆ ಉಳಿದ ಪರೀಕ್ಷೆಗಳ ಹಗರಣದ ಜಾಡು ಹಿಡಿಯಲು ಸಿಐಡಿ ಮುಂದಾಗಿದೆ. ರಾಜ್ಯ ಸರ್ಕಾರದಿಂದ ಹಸಿರು ನಿಶಾನೆ ಸಿಕ್ಕರೆ ಕೆಎಎಸ್ ಹುದ್ದೆಗಳ ನೇಮಕಾತಿ ಅಕ್ರಮದ ಕುರಿತು ಪೂರ್ಣ ಪ್ರಮಾಣದ ತನಿಖೆ ನಡೆಸಲು ಸಿಐಡಿ ಯೋಜಿಸಿದೆ.

ಗ್ಯಾನೇಂದ್ರ ವಿರುದ್ಧ ಮತ್ತೊಂದು ದೂರು

ಬೆಂಗಳೂರು: ಕೆಪಿಎಸ್‌ಸಿ ಹಗರಣದಲ್ಲಿ ಬಂಧನಕ್ಕೊಳಗಾದ ಐಎಎಸ್ ಅಧಿಕಾರಿ ಗ್ಯಾನೇಂದ್ರಗೆ ಮತ್ತೊಂದು ಬಿಗ್ ಶಾಕ್ ಎದುರಾಗಿದೆ. ಅವರ

ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಕೇಸ್ ದಾಖಲಿಸಲಾಗಿದೆ.

ಸರ್ಕಾರಿ ಹುದ್ದೆ ಮತ್ತು ಕಚೇರಿಯ ದುರುಪಯೋಗ ಪಡಿಸಿಕೊಂಡ ಹಿನ್ನೆಲೆ ಈ ಪ್ರಕರಣ ದಾಖಲಿಸಲಾಗಿದೆ. ಹಣದ ಆಮಿಷದಿಂದ ಸರ್ಕಾರದ ಹುದ್ದೆಗೆ ಮೋಸ ಮಾಡಿದ ಹಿನ್ನೆಲೆಯಲ್ಲಿ ಪುಟ 2ಕ್ಕೆ

ನಿವೃತ್ತ ನೌಕರರಿಗೆ ಆರೋಗ್ಯ ಭಾಗ್ಯ

ಬೆಂಗಳೂರು: ರಾಜ್ಯ ಸರ್ಕಾರದ ನಿವೃತ್ತ ನೌಕರರು, ಕುಟುಂಬ ಪಿಂಚಣಿದಾರರಿಗೆ ಗುಡ್ ನ್ಯೂಸ್ ಸಿಕ್ಕಿದೆ. ನಗದು ರಹಿತ ಆರೋಗ್ಯ ಭಾಗ್ಯ ಯೋಜನೆ ಅನುಷ್ಠಾನಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ.

ಸರ್ಕಾರಿ ನಿವೃತ್ತ ನೌಕರರಿಗೆ ಹಾಗೂ ಕುಟುಂಬ ಪಿಂಚಣಿದಾರರಿಗೆ ನಗದು ರಹಿತ ಆರೋಗ್ಯ ಭಾಗ್ಯ ಸಂಧ್ಯಾ ಕಿರಣ ಯೋಜನೆ ಜಾರಿಗೆ ಸರ್ಕಾರ ಆದೇಶ ಹೊರಡಿಸಿದೆ. ಈ ಯೋಜನೆ ಅಡಿ ಉಚಿತ ಚಿಕಿತ್ಸೆ ಸಿಗಲಿದೆ. ವಾರ್ಷಿಕ 5 ಲಕ್ಷದವರೆಗೆ ನಗದುರಹಿತ ವೈದ್ಯಕೀಯ ಚಿಕಿತ್ಸೆ ಇರಲಿದೆ. ಸಂಧ್ಯಾ ಕಿರಣ ಯೋಜನೆ ಜಾರಿಗೆ ಸರ್ಕಾರ ನೌಕರರ ಸಂಘ ಸರ್ಕಾರಕ್ಕೆ ಮನವಿ ಮಾಡಿಕೊಂಡಿತ್ತು.

'ಶುದ್ಧೀಕರಣ' ವಿರುದ್ಧ ಇನ್ನೂ ಎಫ್‌ಐಆರ್ ಆಗಿಲ್ಲ ಏಕೆ?

ನವದೆಹಲಿ: ಉತ್ತರಾಖಂಡದ ಹಲ್ದ್ವಾನಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಹಾಗೂ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ



ಅವರ ಸಾರ್ವಜನಿಕ ಸಭೆ ಬಳಿಕ ರಾಮಲೀಲಾ ಮೈದಾನದಲ್ಲಿ ನಡೆದ ಶುದ್ಧೀಕರಣದ ವಿಚಾರವಾಗಿ ರಾಜಕೀಯ ವಾಕ್ಸಮರ ಮುಂದುವರಿದಿದೆ. ಪ್ರಕರಣದಲ್ಲಿ ಇನ್ನೂ ಎಫ್‌ಐಆರ್ ದಾಖಲಾಗದಿರುವುದನ್ನು ಪ್ರಶ್ನಿಸಿರುವ ಖರ್ಗೆ, ರಾಜ್ಯಸಭೆ ಸದನದ ನಾಯಕ ಜೆ.ಪಿ.ನಡ್ಡಾ ಅವರಿಗೆ ಪತ್ರ ಬರೆದು ಕೂಡಲೇ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಹಲ್ದ್ವಾನಿಯಲ್ಲಿ ಆಗಸ್ಟ್ 8ರಂದು ಖರ್ಗೆ ಸಾರ್ವಜನಿಕ ಸಭೆ ನಡೆಸಿದ್ದರು. ರಾಮಲೀಲಾ ಮೈದಾನದಲ್ಲಿ ಸಭೆ ನಡೆದ ಪುಟ 2ಕ್ಕೆ

ಮತ್ತೆ ಕಳ್ಳಬೇಟೆ ಬೆಳಕಿಗೆ

ಚಾಮರಾಜನಗರ: ಕಾವೇರಿ ವನ್ಯಜೀವಿಧಾಮದ ಹೊಳೆಮುರಿದಟ್ಟಿ ಕರಿಕಲ್ಲುಗುಡ್ಡದಲ್ಲಿ ಅರಣ್ಯಾಧಿಕಾರಿಗಳ ಮೇಲೆ ಗುಂಡಿನ ದಾಳಿ ನಡೆದ ಬೆಚ್ಚಿಬೀಳಿಸುವ ಘಟನೆ ನಡೆದಿದ್ದ ಬೆನ್ನಲ್ಲೇ, ಮಲೆ ಮಹದೇಶ್ವರ ವನ್ಯಜೀವಿಧಾಮದಲ್ಲಿ ಮತ್ತೊಂದು ಅಮಾನವೀಯ ಬೇಟೆ ಪ್ರಕರಣ ಬೆಳಕಿಗೆ ಬಂದಿದೆ. ವಿವರ ಪುಟ 2ಕ್ಕೆ

ತ.ನಾಡು ಮಾಜಿ ಸಿಎಂ ಸ್ಟಾಲಿನ್‌ಗೆ ಮುಖಭಂಗ

ಚೆನ್ನೈ: ತಾನು ಪ್ರತಿನಿಧಿಸುವ ಕೊಳತ್ತೂರು ಕ್ಷೇತ್ರದಲ್ಲಿ ಟಿವಿಕೆ ಶಾಸಕ ವಿ.ಎಸ್.ಬಾಬು ಗೆಲುವನ್ನು ಅಸಿಂಧುಗೊಳಿಸುವಂತೆ ಕೋರಿ ಮಾಜಿ ಸಿಎಂ ಎಂ.ಕೆ.ಸ್ಟಾಲಿನ್ ಸಲ್ಲಿಸಿದ್ದ ಅರ್ಜಿಯನ್ನು ಮದ್ರಾಸ್ ಹೈಕೋರ್ಟ್ ಮಜಾಗೊಳಿಸಿದೆ

ಮುಖ್ಯ ನ್ಯಾಯಮೂರ್ತಿ ಎಸ್.ಎ.ಧರ್ಮಾಧಿಕಾರಿ ಮತ್ತು ನ್ಯಾಯಮೂರ್ತಿ ಜಿ. ಅರುಳ್ ಮುರುಗನ್ ಅವರಿದ್ದ ಪೀಠವು ಸ್ಟಾಲಿನ್ ಅರ್ಜಿಯನ್ನು ವಿಚಾರಣೆಗೆ ಒಳಪಡಿಸಲು ಸಾಧ್ಯವಿಲ್ಲ ಎಂದು ತೀರ್ಪು ನೀಡಿತು. ವಿವಿಪ್ಯಾಟ್, ಕಂಟ್ರೋಲ್ ಯೂನಿಟ್, ಬ್ಯಾಲೆಟ್ ಯೂನಿಟ್‌ಗಳಲ್ಲಿ ದಾಖಲಾದ ಮತಗಳ ಸಂಖ್ಯೆಯಲ್ಲಿ ವ್ಯತ್ಯಾಸಗಳಿವೆ. ಪರಿಶೀಲನೆ ವೇಳೆ ಇವಿಎಂಗಳಲ್ಲಿ ಪುಟ 2ಕ್ಕೆ

ಎಚ್‌ಡಿಕೆಗೆ ಉತ್ತರ ಕೊಡಲು ಅಸಹ್ಯ!

ಕುಮಾರಸ್ವಾಮಿ ವಿರುದ್ಧ ಸಚಿವ ಚಲುವರಾಯಸ್ವಾಮಿ ಲೇವಡಿ

ಬೆಂಗಳೂರು: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಹಿಟ್ ಅಂಡ್ ರನ್ ಆಟ ನಡೆಯಲ್ಲ. ತಾಕತ್ತಿದ್ದರೆ ಬಹಿರಂಗ ಚರ್ಚೆಗೆ ಬರಲಿ ಎಂದು ಸಚಿವ ಎನ್.ಚಲುವರಾಯಸ್ವಾಮಿ ಸವಾಲು ಹಾಕಿದರು.

ವಿಧಾನಸೌಧದಲ್ಲಿ ಗುರುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕೇಂದ್ರ ಮಂತ್ರಿಯಾಗಿದ್ದರೂ ಸದಾ ಕಾಲ ರಾಜ್ಯದಲ್ಲೇ ಇರುವವರಿಗೆ ಏನು ಗೊತ್ತಿದೆ? ಎರಡೂವರೆ ವರ್ಷದಿಂದ ಕೇಂದ್ರ ಮಂತ್ರಿಯಾಗಿ ಅವರೇನು ಕೆಲಸ ಮಾಡಿದ್ದಾರೆ ಎಂಬುದನ್ನು ಮಾಧ್ಯಮಗಳೇ ಹೇಳಲಿ. ಅವರಿಗೆ ಉತ್ತರ ನೀಡಲು ನನಗೆ ಅಸಹ್ಯ ಎನಿಸುತ್ತದೆ. ಮಾಜಿ ಮುಖ್ಯಮಂತ್ರಿಯಾಗಿದ್ದವರಿಗೆ ನಾಲಿಗೆ ಹಿಡಿತದಲ್ಲಿರಬೇಕು ಎಂದು ವಾಗ್ದಾಳಿ ನಡೆಸಿದರು.

ದೇಶದ ಅತೀ ದೊಡ್ಡ ಎರಡು ಖಾತೆಗಳನ್ನು

ಮೊದಲ ಪುಟದಿಂದ

21ರಿಂದ ವಿಶೇಷ ಅಧಿವೇಶನ

ಮೂರು ದಿನಗಳ ಕಾಲ ವಿಶೇಷ ಅಧಿವೇಶನ ನಡೆಯಲಿದೆ. ವಿಶೇಷ ಅಧಿವೇಶನದಲ್ಲಿ ಬರದ ಸ್ಥಿತಿಯ ಬಗ್ಗೆ ಚರ್ಚಿಸಲು ನಿರ್ಧರಿಸಲಾಗಿದೆ. ಈ ಮೊದಲು ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದುರ್ಬಳಕೆ ಪ್ರಕರಣದಲ್ಲಿ ಸಚಿವ ನಾಗೇಂದ್ರ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ ಹೋರಾಟ ಮುಂದುವರೆಸಿತ್ತು. ಅಲ್ಲದೇ ಅಹೋರಾತ್ರಿ ಧರಣಿಗೂ ಸಿದ್ಧತೆ ನಡೆಸಿತ್ತು. ಈ ಮಧ್ಯೆಯೇ ಮೂರು ದಿನ ಮೊದಲೇ ವಿಧಾನಮಂಡಲದ ಕಲಾಪ ಅನಿರ್ದಿಷ್ಟಾವಧಿಗೆ ಮುಂದೂಡಿಕೆ ಮಾಡಲಾಗಿತ್ತು. ಇದೀಗ ಮತ್ತೆ ಮೂರು ದಿನಗಳ ಕಾಲ ವಿಶೇಷ ಅಧಿವೇಶನ ನಡೆಯಲಿದೆ. ಕಸ್ತೂರಿ ರಂಗನ್ ವರದಿ ಹಾಗೂ ಬರದ ಬಗ್ಗೆ ಚರ್ಚೆ ನಡೆಯಲಿದೆ.

ಎಚ್‌ಡಿಕೆಗೆ ನಿದ್ರೆ ಬರ್ತಿಲ್ಲ!

2006ರಲ್ಲಿ ಸಿಎಂ ಆಗಿದ್ದಾಗ ಅವರು ಎರಡು ದಿನ ನಾಪತ್ತೆಯಾಗಿದ್ದರು. ಅವರನ್ನು ಹುಡುಕಿ ಬೆಳಿಗ್ಗೆ ಕ್ಯಾಬಿನೆಟ್‌ಗೆ ಕರೆತರುವ ಟಾಸ್ಕ್ ಅನ್ನು ಎಚ್.ಡಿ. ದೇವೇಗೌಡರು ನನಗೆ ನೀಡಿದ್ದರು. ಅದಕ್ಕಾಗಿ ಬೆಳಿಗ್ಗೆ 5 ಗಂಟೆಗೆ ನಾನು ಮನೆ ಬಾಗಿಲು ಬಡಿದಿದ್ದೆ. ನಾನು ಆಗ ಯಾರ ಮನೆ ಬಾಗಿಲು ಬಡಿದಿದ್ದೆ ಎಂಬುದನ್ನು ವಿವರವಾಗಿ ಕೇಳಲು ಆಸೆ ಇದ್ದರೆ ಹೇಳುತ್ತೇನೆ. ನಾನು ಅವರಂತೆ ಫಿಟ್ ಅಂಡ್ ರನ್ ಕೆಲಸ ಮಾಡುವುದಿಲ್ಲ ಎಂದು ಲೇವಡಿ ಮಾಡಿದರು.

ಉತ್ತರ ಕೊಡಲು ಅಸಹ್ಯ!

ಅನುದಾನವನ್ನು ಕೊಡಿಸುವಲ್ಲಿ ಯಶಸ್ವಿಯಾಗಲಿ ಎಂದು ಸವಾಲು ಹಾಕಿದರು. ಕೆಪಿಎಸ್‌ಸಿಯಲ್ಲಿ ಅಕ್ರಮ ನಡೆದಿದೆ ಎಂಬ ಕುಮಾರಸ್ವಾಮಿ ಆರೋಪದ ಬಗ್ಗೆ ಸಮಗ್ರ ತನಿಖೆಯಾಗಲಿ. ಇದರೊಂದಿಗೆ ನೀಟ್ ಸೇರಿದಂತೆ ಎಲ್ಲವೂ ತನಿಖೆಯಾಗಲಿ. ಆದರೆ ಈಗ ಅಮಾನತು ಗೊಂಡಿರುವ ಕೆಪಿಎಸ್‌ಸಿ ಅಧ್ಯಕ್ಷರನ್ನು ನೇಮಿಸಿದ್ದು ಯಾರು? ಆ ನೇಮಕದ ಹೊಣೆಯನ್ನು ಬಿಜೆಪಿ-ಜೆಡಿಎಸ್ ಹೊರಬೇಕು. ಪ್ರಸ್ತುತ ಕೆಇಎಯಲ್ಲಿ ಯಾವುದೇ ಅಕ್ರಮಗಳಿಲ್ಲ ಎಂದರು.

ಕುಮಾರಸ್ವಾಮಿ ಅವರು ಸಿಎಂ ಆಗಿದ್ದ ವೇಳೆ ದೆಹಲಿ ಮೂಲಕ ತಮಿಳುನಾಡಿಗೆ ನೀರು ಹರಿಸುತ್ತಿದ್ದರೇನೋ? ನಾನು ನೀರಾವರಿ ಸಮಸ್ಯೆ ಕುರಿತು ಚರ್ಚೆಗೆ ದೆಹಲಿಗೆ ಹೋಗಿದ್ದೆ. ಮೇಕೆದಾಟು ಬಗ್ಗೆ ಕೇಂದ್ರದ ಅಧಿಕಾರಿಗಳ ಜೊತೆ ಒಂದು ಗಂಟೆಗೂ ಹೆಚ್ಚು ಚರ್ಚಿಸಿದ್ದೇವೆ. ಮಹದಾಯಿ ಯೋಜನೆಗಾಗಿ ಪ್ರಲ್ಹಾದ್ ಜೋಶಿ ಅವರ ಬಳಿಯೂ ಪ್ರತ್ಯೇಕವಾಗಿ ಮಾತನಾಡುತ್ತೇನೆ. ನ್ಯಾಯಾಲಯದ ಹೋರಾಟದ ಮೂಲಕ 12 ಸಾವಿರ ಕ್ಯೂಸೆಕ್ ಬದಲಿಗೆ 9 ಸಾವಿರ ಕ್ಯೂಸೆಕ್‌ಗೆ ಆದೇಶ ಪಡೆದಿದ್ದೇವೆ. ಮುಂದಿನ ಕಲಾಪದಲ್ಲಿ ನೀರು ನಿಲ್ಲಿಸಲು ಶ್ರಮಿಸುತ್ತೇವೆ. ರೈತರ ರಕ್ಷಣೆ ನನ್ನ ಜವಾಬ್ದಾರಿ. ಡ್ಯಾಂಗಳ ವೆಬ್‌ಸೈಟ್ ಹ್ಯಾಕ್ ಬಗ್ಗೆ ಸೈಬರ್ ಠಾಣೆಯಲ್ಲಿ ದೂರು ದಾಖಲಾಗಿದೆ ಎಂದು ತಿಳಿಸಿದರು.

ಗ್ಯಾನೇಂದ್ರ ವಿರುದ್ಧ ದೂರು

ಎಫ್‌ಐಆರ್‌ನಲ್ಲಿ ಸಂಬಂಧಿತ ಸೆಕ್ಷನ್ ಸೇರಿಸಲಾಗಿದೆ. ಕೆಪಿಎಸ್‌ಸಿ ಕಚೇರಿಯಲ್ಲಿ ಸಿಐಡಿ ಅಧಿಕಾರಿಗಳು ಗುರುವಾರ ಮಹಜರು ನಡೆಸಿದರು. ಪ್ರಶ್ನೆಪತ್ರಿಕೆ ಲೀಕ್ ಆಗಿದ್ದ ಹಿನ್ನೆಲೆ ಗ್ಯಾನೇಂದ್ರ ಕೊಠಡಿಯಲ್ಲಿ ಮಹಜರು ನಡೆಸಲಾಗಿದೆ. ಬಳಿಕ ಗ್ಯಾನೇಂದ್ರ ಅವರನ್ನು ಸಿಐಡಿ ಅಧಿಕಾರಿಗಳು ಕರೆದುಕೊಂಡು ಹೋಗಿದ್ದಾರೆ.

ಸ್ಟಾಲಿನ್‌ಗೆ ಮುಖಭಂಗ

ಕಂಡುಬಂದ ತಾಂತ್ರಿಕ ದೋಷಗಳನ್ನು ಚುನಾವಣಾ ಅಧಿಕಾರಿಗಳು ಬಗೆಹರಿಸಿಲ್ಲ ಎಂದು ಎಂ.ಕೆ.ಸ್ಟಾಲಿನ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಸಾಹುಕಾರ್‌ಗೆ ಸಿಐಡಿ ಬುಲಾವ್

ಭೀತಿಯಲ್ಲಿರುವ ಮಾಜಿ ಅಧ್ಯಕ್ಷರಿಗೆ ಸಿಐಡಿ ಬುಲಾವ್ ಕೊಟ್ಟಿದೆ. ವಿಚಾರಣೆಗೆ ಶಿವಶಂಕರಪ್ಪ ಸಾಹುಕಾರ್ ಶುಕ್ರವಾರ ಹಾಜರಾಗುವ ಸಾಧ್ಯತೆ ಇದೆ.

ಉದ್ಯಾನವನ ಮಸೂದೆ ವಾಪಸ್

ಮಸೂದೆಯನ್ನು ವಿಧಾನಸಭೆಯಲ್ಲಿ ಯಾವುದೇ ಚರ್ಚೆಯಿಲ್ಲದೆ ಅಂಗೀಕರಿಸಲಾಗಿತ್ತು. ಮಸೂದೆಯ ಪ್ರಕಾರ, ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿರುವ ಯಾವುದೇ ಉದ್ಯಾನವನ ಅಥವಾ ತೋಟದ ಒಟ್ಟು ವಿಸ್ತೀರ್ಣದ ಶೇಕಡ 5ರಷ್ಟು ಭಾಗವನ್ನು ಮೂಲಸೌಕರ್ಯ ಅಥವಾ ಯಾವುದೇ ಉಪಯುಕ್ತ ಯೋಜನೆಗೆ ಬಳಸಿಕೊಳ್ಳಲು ಅವಕಾಶ ನೀಡಲಾಗಿತ್ತು.

ನಿರೀಕ್ಷಣಾ ಜಾಮೀನು ಅರ್ಜಿ ವಜಾ

ಪ್ರಕರಣ ದಾಖಲಾದ ಬಳಿಕ ಪೊಲೀಸರು ಆರೋಪಿ ಐಶ್ವರ್ಯ ವಿಚಾರಣೆ ನಡೆಸಲಾಗಿತ್ತು. ಬಂಧನ ಭೀತಿಯಲ್ಲಿದ್ದ ಐಶ್ವರ್ಯ, ನ್ಯಾಯಾಲಯಕ್ಕೆ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ. ಅರ್ಜಿ ವಜಾಗೊಂಡ ಬೆನ್ನಲ್ಲೇ ಪೊಲೀಸರು ಐಶ್ವರ್ಯ ಬಂಧನಕ್ಕಾಗಿ ತೀವ್ರ ಶೋಧ ನಡೆಸುತ್ತಿದ್ದಾರೆ.

ಮಿತ್ರಪಕ್ಷಗಳಿಗೆ ಮತ್ತಷ್ಟು ಸ್ಥಾನ

ಸಚಿವ ಸ್ಥಾನಕ್ಕಾಗಿ ಬೇಡಿಕೆ ಬರುವ ಸಾಧ್ಯತೆ ಕುರಿತು ಚರ್ಚೆ ನಡೆದಿದೆ. ಎನ್‌ಡಿಎ ಮಿತ್ರಪಕ್ಷಗಳಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡುವ ಸಾಧ್ಯತೆಯೂ ಚರ್ಚೆಯಲ್ಲಿದೆ. ಜೆಡಿಯು, ಟಿಡಿಪಿ, ಎನ್‌ಸಿಪಿ ಹಾಗೂ ಇತರ ಮಿತ್ರಪಕ್ಷಗಳಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಗಬಹುದು ಎಂಬ ನಿರೀಕ್ಷೆ ಇದೆ.

'ಶುದ್ಧೀಕರಣ' ವಿರುದ್ಧ ಇನ್ನೂ ಎಫ್‌ಐಆರ್ ಆಗಿಲ್ಲ ಏಕೆ?

ಬಳಿಕ ಕೆಲವರು ಶುದ್ಧೀಕರಣ ವಿಧಿ ನಡೆಸಿದ್ದರು. ಈ ಘಟನೆ ನಡೆದು 24 ದಿನಗಳಾದರೂ ಸಂಬಂಧಪಟ್ಟ ವ್ಯಕ್ತಿಗಳು ಹಾಗೂ ಸಂಘಟನೆಗಳ ವಿರುದ್ಧ ಎಫ್‌ಐಆರ್ ದಾಖಲಾಗಿಲ್ಲ ಎಂದು ಖರ್ಗೆ ಪತ್ರದಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಹೈಕೋರ್ಟ್ ಛೀಮಾರಿ

ಅವಕಾಶ ಕೇಳಿದರು. ಸೆ.7ಕ್ಕೆ ಕೋರ್ಟ್ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಮುಂದೂಡಿತು.

ಮಾನವ ಹಕ್ಕುಗಳ ಉಲ್ಲಂಘನೆಗೆ ಕಟ್ಟುನಿಟ್ಟಿನ ತಡೆ:ಉಷಾರಾಣಿ

ಮೈಸೂರು: ಮಾನವ ಅಕ್ರಮ ಸಾಗಣೆಯು ವ್ಯಕ್ತಿಯ ಘನತೆ, ದೈಹಿಕ ಸ್ವಾಸ್ಥ್ಯ ಹಾಗೂ ವೈಯಕ್ತಿಕ ಸ್ವಾತಂತ್ರ?ಯದ ಮೇಲಿನ ಗಂಭೀರ ಆಕ್ರಮಣ ವಾಗಿದೆ. ಸಂತ್ರಸ್ತರ ಪುನರ್ವಸತಿಯು ಕೇವಲ ಸರ್ಕಾರದ ನೀತಿಗೆ ಸಂಬಂಧಿಸಿದ ವಿಷಯವಲ್ಲ, ಬದಲಾಗಿ ಅದು ಭಾರತೀಯ ಸಂವಿಧಾನದ 21ನೇ ವಿಧಿಯಡಿ ಘನತೆಯುಳ್ಳ ಜೀವನದ ಹಕ್ಕಿನ ಅವಿಭಾಜ್ಯ ಅಂಗವಾಗಿದೆ, ಪ್ರತಿಯೊಬ್ಬ ವ್ಯಕ್ತಿಯೂ ಘನತೆಯಿಂದ ಜೀವಿಸುವ ಹಕ್ಕನ್ನು ಹೊಂದಿದ್ದಾನೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಉಷಾರಾಣಿ ಹೇಳಿದರು.

ಜಿಲ್ಲಾ ಪಂಚಾಯತ್ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ಮಾನವ ಕಳ್ಳ ಸಾಗಾಣಿಕೆ ತಡೆ ದಿನಾಚರಣೆ ಹಾಗೂ ಉದಯ ಹೆಜ್ಜೆ ವಿಮೋಚಿತ ಜೀತ ಕಾರ್ಮಿಕರ ಒಕ್ಕೂಟ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು. ವಿಶ್ವಸಂಸ್ಥೆಯು 2013 ರಿಂದ ಜುಲೈ 30ನ್ನು ವಿಶ್ವ ಮಾನವ ಕಳ್ಳಸಾಗಣೆ ವಿರೋಧಿ ದಿನವೆಂದು ಆಚರಿಸುತ್ತಿದ್ದು, ಇದು ಕೇವಲ ಆಚರಣೆಯಲ್ಲ, ಆತ್ಮವಲೋಕನ ಹಾಗೂ ಸಮಾಜ ವನ್ನು ಎಚ್ಚರಿಸುವ ದಿನವಾಗಿದೆ. ಪ್ರಸಕ್ತ ವರ್ಷದ ಧೇಯವಾಕ್ಯ" ಟ್ರಯಾಪ್ಡ್ ಬಿಹೈಂಡ್ ದಿ ಸ್ಕ್ರೀಮ್" ಎಂಬ ಉದ್ದೇಶದೊಂದಿಗೆ ಆನ್‌ಲೈನ್ ಸೈಬರ್ ಅಪರಾಧಗಳು ಹಾಗೂ ವಂಚನೆಗಳ ಮೂಲಕ ಜನರನ್ನು ಕಳ್ಳಸಾಗಣೆಗೆ ಗುರಿಪಡಿಸುವ ಹೊಸ ಜಾಲ ಗಳ ವಿರುದ್ಧ ಜಾಗೃತಿ ಮೂಡಿಸಬೇಕು ಎಂದರು.

ಅಪರಾಧಿಗಳಿಗೆ 10 ವರ್ಷದಿಂದ ಜೀವಾವಧಿವರೆಗೆ ಶಿಕ್ಷೆ ವಿಧಿಸುವ ಕಾನೂನುಗಳಿದ್ದು, ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 143, ಬಾಲಕಾರ್ಮಿಕ ಕಾಯ್ದೆ ಹಾಗೂ ಸುಪ್ರೀಂ ಕೋರ್ಟ್‌ನ ಮೇನಕಾ ಗಾಂಧಿ, ವಿಶಾಖ ಮತ್ತು ಪ್ರಜ್ವಲ ಪ್ರಕರಣದ ಪ್ರಮುಖ ತೀರ್ಪುಗಳು ಸಂವಿಧಾನಬದ್ಧ ಜೀವಿಸುವ ಹಕ್ಕನ್ನು ಎತ್ತಿಹಿಡಿದಿವೆ. ಕೇವಲ ಸರಕಾರ ಮತ್ತು ಇಲಾಖೆಗಳು ಮಾತ್ರವಲ್ಲದೆ ಪ್ರತಿಯೊಬ್ಬ ನಾಗರಿಕನು ಜಾಗೃತರಾಗಿ ಸಮಾಜದ ಮುಗ್ಧರನ್ನು ಮತ್ತು ಮಕ್ಕಳನ್ನು ರಕ್ಷಿಸಲು ಕೈಜೋಡಿಸಬೇಕೆಂದು ಹೇಳಿದರು.

ವಿಕಾಸ ಸಂಸ್ಥೆಯ ಅಧ್ಯಕ್ಷರಾದ ವರ್ಗಿಸ್ ಕ್ಲೀಟಸ್ ಮಾತನಾಡಿ ಜೀತಪದ್ಧತಿಯು ಕೇವಲ ಸರಪಳಿಯಿಂದ ಬಂಧಿಸುವುದಷ್ಟೇ ಅಲ್ಲ ಇಂದು ಬಿಹಾರ, ತಮಿಳುನಾಡು, ಮಧ್ಯಪ್ರದೇಶ ಹಾಗೂ ಉತ್ತರ ಪ್ರದೇಶಗಳಿಂದ ಕೆಲಸ ಹುಡುಕಿಕೊಂಡು ಬರುವ ಬಡ ಕಾರ್ಮಿಕರನ್ನು ಸಾಲದ ಸುಳಿಯಲ್ಲಿ ಸಿಲುಕಿಸಿ ಶೋಷಿಸಲಾಗುತ್ತಿದೆ. ಮೈಸೂರು, ಚಿಕ್ಕಮಗಳೂರು, ಮಂಡ್ಯ, ಕೊಡಗು ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಕಾಫಿ ತೋಟಗಳು, ಕ್ವಾರಿಗಳು, ಕಬ್ಬು ಕಡಿಯುವ ಕ್ಷೇತ್ರಗಳು ಮತ್ತು ಶೂಟಿಂಗ್ ತೋಟಗಳಲ್ಲಿ ಇಂತಹ ಶೋಷಣೆಗಳು ಹೆಚ್ಚಾಗಿ ಕಂಡುಬರುತ್ತಿವೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ನಾಗರಾಜು ಮಾತನಾಡಿದರು. ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಸದಸ್ಯ ಕಾರ್ಯದರ್ಶಿ ನಾಗರಾಜ ಸಿದ್ದಪ್ಪ ಅಂಕಸದೊಡ್ಡಿ, ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ, ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ರವಿಚಂದ್ರ, ವಿಜಯ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಯಶಸ್ಸಿಗೆ ಸ್ಪಷ್ಟ ಗುರಿ ಇರಲಿ

ಡಾ.ನಾಗೇಂದ್ರ.ಕೆ.ಎಸ್ ಕರೆ । ಪರಿಚಯಾತ್ಮಕ ಕಾರ್ಯಕ್ರಮ

ರಾಮನಗರ: ಜೀವನದಲ್ಲಿನ ಯಶಸ್ಸಿಗೆ ಸ್ಪಷ್ಟ ಗುರಿಗಳನ್ನು ನಿಗಧಿಪಡಿಸಿಕೊಳ್ಳಿ ಮತ್ತು ಅವುಗಲನ್ನು ಸಾಧಿಸಲು ನಿರಂತರ ಶ್ರಮಿಸಿ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಂಗಳೂರು ಎಮೆರಿಟಸ್ ಪ್ರಾಧ್ಯಾಪಕರು ಹಾಗೂ ವಿಶೇಷ ಅಧಿಕಾರಿಗಳಾದ ಡಾ.ನಾಗೇಂದ್ರ ಕೆ.ಎಸ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ನಗರದಲ್ಲಿ ಗೌಸಿಯಾ ಇಂಜಿನಿಯರಿಂಗ್ ಕಾಲೇಜಿನಲ್ಲಿ 20262-7ನೇ ಸಾಲಿಗೆ ಬಿ.ಇ/ಬಿಬಿಎ/ಬಿಸಿಎ ಕೋರ್ಸುಗಳಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಸ್ವಾಗತ ಹಾಗೂ ಪರಿಚಯ ಕಾರ್ಯ ಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು. ಪಠ್ಯಪುಸ್ತಕಗಳಾಚೆಗಿನ ಜ್ಞಾನವನ್ನು ಗಳಿಸುವುದು, ಸಂವಹನ ಹಾಗೂ ತಾಂತ್ರಿಕ ಕೌಶಲ್ಯಗಳನ್ನು ಬೆಳೆಸಿಕೊಳ್ಳಿ ಎಂದು ಅವರು ತಿಳಿಸಿದರು.

ಸಕರಾತ್ಮಕ ಮನೋಭಾವ ಮುಖ್ಯ - ನವಾಜ್ ಎ.ಷರೀಪ್

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ ಗೌಸಿಯಾ ಇಂಜಿನಿಯರಿಂಗ್ ಕಾಲೇಜಿನ ಆಡಳಿತ ಸಂಸ್ಥೆ ಜಿ.ಇ.ಐ.ಟಿಯ ಅಧ್ಯಕ್ಷ ನವಾಜ್ ಎ.ಷರೀಪ್ ಮಾತ ನಾಡಿ, ವಿದ್ಯಾರ್ಥಿಗಳು ಸಕಾರಾತ್ಮಕ ಮನೋಭಾ ವವನ್ನು ಹೊಂದುವುದು ಇಂದಿಗಿನ ಜಗತ್ತಿಗೆ ಅತ್ಯವಶ್ಯಕವಾಗಿದೆ ಎಂದರು. ಇಂದು ಜಗತ್ತಿನಲ್ಲಿ ವೇಗವಾಗಿ ಬದಲಾಗುತ್ತಿರುವ ತಂತ್ರಜ್ಞಾನಕ್ಕೆ ಹೊಂದಿಕೊಳ್ಳುವುದರ ಮಹತ್ವದ ಬಗ್ಗೆ ಅವರು ಮಾತನಾಡಿದರು. ಶಿಸ್ತು, ಕಠಿಣ ಪರಿಶ್ರಮ, ನೈತಿಕ ಮೌಲ್ಯಗಳು ಮತ್ತು ಶೈಕ್ಷಣಿಕ ಶ್ರೇ?ತೆಯ ಬಗೆಗಿನ ಬದ್ಧತೆಯ ಮಹತ್ವವನ್ನು ತಿಳಿಸಿದರು. ಸಂಸ್ಥೆಯು ಒದಗಿಸುವ ಅವಕಾಶಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಿ, ಜವಾಬ್ದಾರಿಯುತ ವೃತ್ತಿಪರರು ಮತ್ತು ನಾಗರಿಕರಾಗಿ ತಮ್ಮನ್ನು ತಾವು ರೂಪಿಸಿಕೊಳ್ಳು ವಂತೆಯೂ ಅವರು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರು.

ಸಂವಹನ ಕೌಶಲಗಳನ್ನು ರೂಢಿಸಿಕೊಳ್ಳಿ - ಡಾ.ಎನ್.ಎಸ್.ಕುಮಾರ್

ಗೌಸಿಯಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್.ಎಸ್.ಕುಮಾರ್ ಮಾತನಾಡಿ, ವಿದ್ಯಾರ್ಥಿಗಳು ಕಾಲೇಜಿಗೆ ನಿಯಮಿತ ಹಾಜರಾತಿ, ಶಿಸ್ತು, ಸಮಯ ನಿರ್ವಹಣೆ, ಸಂವಹನ ಕೌಶಲಗಳನ್ನು, ತಾಂತ್ರಿಕ ಜ್ಞಾನವನ್ನು ರೂಢಿಸಿಕೊಳ್ಳಬೇಕು. ಸಹ-ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಿಕೆಯ ಮಹತ್ವವನ್ನು ಅವರು ತಿಳಿಸಿದರು. ಕಾಲೇಜಿನ ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತೆ ಹಾಗೂ ಬೋಧಕರು ಮತ್ತು ಮಾರ್ಗದರ್ಶಕರಿಂದ ಸೂಕ್ತ ಸಲಹೆ-ಸೂಚನೆಗಳನ್ನು ಪಡೆಯುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರು. ಆಡಳಿತಾಧಿಕಾರಿ ಪ್ರೊ.ವಿಜಾಜ್ ಅಹಮದ್.ಕೆ.ಆರ್. ಉಪಸ್ಥಿತರಿದ್ದರು. ವಿಜ್ಞಾನ ವಿಭಾಗದ ಮುಖ್ಯಸ್ಥರು ಹಾಗು ಪರಿಚಯಾತ್ಮಕ ಕಾರ್ಯಕ್ರಮದ ಸಂಯೋಜಕರಾಗಿದ್ದ ಡಾ.ಸೈಫುಲ್ಲ ಖಾನ್ ಸ್ವಾಗತಿಸಿದರು. ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಎಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಮೊಹಮ್ಮದ್ ಝುಮ್ಮರ್ ಪಾ?ಾ ಕಾರ್ಯಕ್ರಮ ನಿರೂಪಿಸಿದರು. ಗಣಿತ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಜ್ಯೋತಿ ಹೆಚ್.ಆರ್. ಅವರು ವಂದಿಸಿದರು.

ಸಹ-ಪಠ್ಯ ಚಟುವಟಿಕೆಗಳು ಕಲಿಕೆಯ ಭಾಗ

ಉಮರ್ ಇಸ್ಮಾಯಿಲ್

ಜಿಇಐಟಿಯ ಗೌರವ ಕಾರ್ಯದರ್ಶಿ ಉಮರ್ ಇಸ್ಮಯಿಲ್ ಖಾನ್ ಮಾತನಾಡಿ, ಶೈಕ್ಷಣಿಕ, ಸಹ-ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರು. ಕಾಲೇಜಿಗೆ ಹೊಸದಾಗಿ ಸೇರ್ಪಡೆಯಾಗಿರುವ ವಿದ್ಯಾರ್ಥಿಗಳಿಗೆ ಕಾಲೇಜಿನ ಶೈಕ್ಷಣಿಕ ವಾತಾವರಣ, ಸಾಂಸ್ಥಿಕ ಮೌಲ್ಯಗಳ ಪರಿಚಯ ಮಾಡಲು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಜೊತೆಗೆ ಕಾಲೇಜಿನಲ್ಲಿ ಲಭ್ಯವಿರುವ ಸೌಲಭ್ಯಗಲು ಮತ್ತು ಅವಕಾಶಗಳ ಬಗ್ಗೆಯೂ ಅರಿವು ಮೂಡಲಿದೆ ಎಂದರು. ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಹಾಗೂ ಪೂರಕವಾದ ಕಲಿಕಾ ವಾತಾವರಣವನ್ನು ನಿರ್ಮಿಸಲು ಸಂಸ್ಥೆಯು ಹೊಂದಿರುವ ಬದ್ಧತೆಯ

ನಾಳೆ ಅರ್ಕಧಾಮದಲ್ಲಿ ಗ್ರಂಥ ಲೋಕಾರ್ಪಣೆ

ಮೈಸೂರು: ಗದ್ದಿಗೆ ಮುಖ್ಯ ರಸ್ತೆಯ ಅರ್ಕ ಧಾಮದಲ್ಲಿನ ಅರ್ಕ ಫೌಂಡೇಷನ್ ವತಿಯಿಂದ ಸೆ. 5 ರ ಬೆಳಗ್ಗೆ 11ಕ್ಕೆ ಸಂಸ್ಥೆಯಲ್ಲಿ ಯೋಗಿ ಶ್ರೀನಿವಾಸ ಅರ್ಕ ಅವರು ರಚಿಸಿರುವ ಆತ್ಮಾನ್ವೇಷಣೆಯ ಸಾಧನೆಗಳು ಗ್ರಂಥದ ಲೋಕಾರ್ಪಣೆ ಕಾರ್ಯಕ್ರಮ ನಡೆಯಲಿದೆ ಎಂದು ಯೋಗ ಪ್ರಕಾಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಡಾ.ಎಚ್.ವಿ. ನಾಗರಾಜರಾವ್ ಕೃತಿ ಬಿಡುಗಡೆ ಗೊಳಿಸುವರು, ಎಂ. ಚಂದ್ರಶೇಖರ್ ಪ್ರಾಸ್ತಾವಿಕ ನುಡಿ ಆಡುವರು, ಪ್ರೊ. ರಾಮಚಂದ್ರ ಜಿ. ಭಟ್ ಕೋಟೆಮನೆ ಅಧ್ಯಕ್ಷತೆ ವಹಿಸುವರು, ಎಂ.ಆರ್. ಸತ್ಯನಾರಾಯಣ, ಎನ್.ಎಂ. ನವೀನ್‌ಕುಮಾರ್ ಇನ್ನಿತರರು ವೇದಿಕೆಯಲ್ಲಿರುವರು. ಇದೇ ವೇಳೆ ಹಲವರಿಗೆ ಅರ್ಕ ಮಹಾ ಗಣಪತಿ ಪ್ರಶಸ್ತಿ ಪ್ರದಾನ ಮಾಡಲಾಗುವುದೆಂದರು. ಎನ್.ಅನಂತ, ಸುಮತಿ ಸುಬ್ರಹ್ಮಣ್ಯ ಇದ್ದರು.

ಆಸ್ಕರ್ ರೆಕಾರ್ಡ್‌ಗೆ ಸನ್ಮಾನ

ಮೈಸೂರು: ಆಸ್ಕರ್ ಬುಕ್ ಆಫ್ ರೆ

ಬೌದ್ಧ ಧರ್ಮ ವೈಜ್ಞಾನಿಕ ತಳಹದಿಯ ಮೇಲೆ ಸ್ಥಾಪಿತವಾಗಿದೆ

ಶಾಸಕ ಎ.ಆರ್. ಕೃಷ್ಣಮೂರ್ತಿ

ಗುಂಡ್ಲುಪೇಟೆ, ಸೆ.2: ಬೌದ್ಧ ದಮ್ಮವು ವಿಶ್ವಮಾನ್ಯ ಧರ್ಮವಾಗಿದ್ದು, ವೈಜ್ಞಾನಿಕ ತಳಹದಿಯ ಮೇಲೆ ಸ್ಥಾಪಿತವಾಗಿದೆ ಎಂದು ಶಾಸಕ ಹಾಗೂ ಅಂತರರಾಷ್ಟ್ರೀಯ ಬೌದ್ಧ ಮಹಾಸಮ್ಮೇಳನ ಆಚರಣಾ ಸಮಿತಿ ಅಧ್ಯಕ್ಷ ಎ.ಆರ್. ಕೃಷ್ಣಮೂರ್ತಿ ಹೇಳಿದರು.

ಪಟ್ಟಣದ ಗುರುಭವನದಲ್ಲಿ ನಡೆದ ಅಂತರರಾಷ್ಟ್ರೀಯ ಬೌದ್ಧ ಮಹಾಸಮ್ಮೇಳನದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಕ್ಟೋಬರ್ 24 ಮತ್ತು 25ರಂದು ನಡೆಯಲಿರುವ ಮಹಾಸಮ್ಮೇಳನಕ್ಕೆ ಕನಿಷ್ಠ ಎರಡು ಲಕ್ಷ ಜನರು ಭಾಗವಹಿಸುವ ನಿರೀಕ್ಷೆಯಿದೆ. ಸಮ್ಮೇಳನದ ಉದ್ದೇಶ ಹಾಗೂ ಬೌದ್ಧ ದಮ್ಮದ ವಿಚಾರಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಜಿಲ್ಲೆಯಾದ್ಯಂತ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಸಮ್ಮೇಳನದ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು 'ದಮ್ಮ ಪಯಣ' ಸ್ತಬ್ಧಚಿತ್ರ ಮೆರವಣಿಗೆ ಆಯೋಜಿಸಲಾಗಿದ್ದು, ಸೆ.3ರಂದು ಚಾಮರಾಜನಗರದಲ್ಲಿ ಉದ್ಘಾಟನೆಗೊಳ್ಳಲಿದೆ. ಬಳಿಕ ಒಂದು ತಿಂಗಳ ಕಾಲ ಜಿಲ್ಲೆಯ ವಿವಿಧ ಗ್ರಾಮಗಳಿಗೆ ತೆರಳಿ ಬೌದ್ಧ ದಮ್ಮದ ಸಂದೇಶವನ್ನು ಜನರಿಗೆ ತಲುಪಿಸಲಿದೆ ಎಂದು ತಿಳಿಸಿದರು.

ನಿವೃತ್ತ ಜಂಟಿ ನಿರ್ದೇಶಕ ಮಂಜು ಕೋಡಿಉಗನೆ ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ರವರು ಸಾಕಷ್ಟು ಶೋಷಣೆ ಹಾಗೂ ಸಂಕಷ್ಟಗಳನ್ನು ಎದುರಿಸಿ ಬೆಳೆದವರು. ಅವರು ಬೌದ್ಧ ದಮ್ಮವನ್ನು ಸ್ವೀಕರಿಸಿದ ನಂತರ ಅವರ ಅನುಯಾಯಿಗಳಾದ ನಾವು ದಮ್ಮದ ತತ್ವಗಳನ್ನು ಅರಿತು ಮುನ್ನಡೆಯುವುದು ನಮ್ಮ ಜವಾಬ್ದಾರಿಯಾಗಿದೆ ಎಂದರು. ದಲಿತ ಮುಖಂಡ ವೆಂಕಟರಮಣಸ್ವಾಮಿ ಮಾತನಾಡಿ, ವಿಶ್ವ ಬೌದ್ಧ ಸಮ್ಮೇಳನ ನಡೆಯುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಇಂತಹ ಮಹತ್ವದ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ದೊರೆತಿರುವುದು ಪುಣ್ಯದ ಕೆಲಸವಾಗಿದ್ದು, ಸಮ್ಮೇಳನವನ್ನು ಯಶಸ್ವಿಗೊಳಿಸಲು ಎಲ್ಲರೂ ಸಹಕರಿಸಬೇಕು ಎಂದು ಕರೆ ನೀಡಿದರು. ಸಭೆಯ ಆರಂಭದಲ್ಲಿ ಮನೋರಕ್ಷಿತ ಬಂತೇಜಿ ಅವರು ಬುದ್ಧ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ನೆರವೇರಿಸಿದರು. ಬೋಧಿರತ್ನ ಬಂತೇಜಿ, ಮುಳ್ಳೂರು ಶಿವಮಲ್ಲು, ಕೇಶವಮೂರ್ತಿ, ಡಾ. ನವೀನ್ ಮೌರ್ಯ, ಪುರಸಭೆ ಮಾಜಿ ಅಧ್ಯಕ್ಷ ಅಣ್ಣಯ್ಯಸ್ವಾಮಿ, ಜಿಪಂ ಮಾಜಿ ಸದಸ್ಯರಾದ ಬೊಮ್ಮಯ್ಯ, ನಾಗರಾಜು, ಶಿವಸ್ವಾಮಿ ಹೊರೆಯಾಲ, ಆರ್. ಮಹದೇವ, ಸುಭಾಷ್ ಮಾಡ್ರಳ್ಳಿ, ಆರ್. ಸೋಮಣ್ಣ, ಹುಲಸಗುಂದಿ ಮಹದೇವಯ್ಯ, ಮಲ್ಲರಾಜ್, ಕಬ್ಬಳ್ಳಿ ನಂಜುಂಡಸ್ವಾಮಿ, ಸಂಪತ್, ಡಾ. ಲಕ್ಷ್ಮಿಪ್ರೇಮಕುಮಾರ್, ಪುಟಗೋಪಮ್ಮ, ವಕೀಲರಾದ ಲೀಲಾಂಬಿಕೆ ಸೇರಿದಂತೆ ಉಪಸ್ಥಿತರಿದ್ದರು.

16ರಿಂದ ವಚನ ಸಂಗೀತೋತ್ಸವ

ಮೈಸೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 12ನೇ ಶತಮಾನದ ಬಸವಾದಿ ಶರಣರ ವಿಚಾರಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಉದ್ದೇಶದಿಂದ 2026ರ ಸೆಪ್ಟೆಂಬರ್ 16 ಮತ್ತು 17 ರಂದು ಮೈಸೂರಿನ ಸುತ್ತೂರು ಮಠದಲ್ಲಿ ವಚನ ಸಂಗೀತೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ವಿವಿಧ ವಯೋಮಾನದ ವಿದ್ಯಾರ್ಥಿಗಳಿಗೆ 2026 ರ ಸೆಪ್ಟೆಂಬರ್ 10 ಮತ್ತು 11 ರಂದು ಬೆಳಗ್ಗೆ 10:30 ಗಂಟೆಗೆ ಮೈಸೂರಿನ ಕಲಾಮಂದಿರದಲ್ಲಿ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಆಸಕ್ತಿ ಇರುವ ವಿದ್ಯಾರ್ಥಿಗಳು ತಮ್ಮ ಸ್ವ-ವಿವರ ಹಾಗೂ ವಯಸ್ಸಿನ ಪ್ರಮಾಣಪತ್ರದೊಂದಿಗೆ 2026ರ ಸೆಪ್ಟೆಂಬರ್ 8ರ ಸಂಜೆ 5:30 ರೊಳಗೆ ಮೈಸೂರು ಕಲಾಮಂದಿರದಲ್ಲಿರುವ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ.. ಹೆಚ್ಚಿನ ಮಾಹಿತಿಗಾಗಿ ಕಚೇರಿ ಸಿಬ್ಬಂದಿ ನಿಖಿಲ್ ಮೂರ್ತಿ ಎಂ.ಕೆ – 9008644750 ಅವರನ್ನು ಸಂಪರ್ಕಿಸಬಹುದಾಗಿದೆ.

ಜಿಲ್ಲಾಡಳಿತ ಭವನಕ್ಕೆ ಡಿಸಿಎಂ ಭೇಟಿ

ಚಾಮರಾಜನಗರ: ಉಪಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರಾದ ಡಾ. ಜಿ. ಪರಮೇಶ್ವರ ಅವರು ಜಿಲ್ಲಾಡಳಿತ ಭವನಕ್ಕೆ ಆಗಮಿಸಿ ಗೌರವ ವಂದನೆ ಸ್ವೀಕರಿಸಿದರು.

ಇದೇ ವೇಳೆ ಉಪಮುಖ್ಯಮಂತ್ರಿಗಳು ಜಿಲ್ಲಾ ಡಳಿತ ಭವನದ ಆವರಣದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಬಸವೇಶ್ವರರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಬಳಿಕ ಜಿಲ್ಲಾಧಿಕಾರಿ ಕಚೇರಿಗೆ ಭೇಟಿ ನೀಡಿದರು. ಪಶು ಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ. ಪುಟ್ಟರಂಗಶೆಟ್ಟಿ, ಶಾಸಕರಾದ ಎಚ್.ಎಂ. ಗಣೇಶ್ ಪ್ರಸಾದ್, ದರ್ಶನ್ ಧ್ರುವನಾರಾಯಣ್, ಕಾಡಾ ಅಧ್ಯಕ್ಷರಾದ ಪಿ.ಮರಿಸ್ವಾಮಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮದ್ ಅಸ್ಗರ್ ಮುನ್ನಾ, ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ಈ ಸಂದರ್ಭದಲ್ಲಿ ಇದ್ದರು.

ನಂತರ ಉಪಮುಖ್ಯಮಂತ್ರಿಗಳು ಬರ ಪೀಡಿತ ಸ್ಥಳಗಳ ಮುಂದುವರಿದ ಪರಿಶೀಲನೆ ಕಾರ್ಯಕ್ಕೆ ತೆರಳಿದರು.

ಸಿಮೆಂಟ್ ರಸ್ತೆ ಅಭಿವೃದ್ಧಿಗೆ ಚಾಲನೆ

ಚಾಮರಾಜನಗರ, ಹೊಂಗನೂರು ಗ್ರಾಮದ ಕ್ಷೇತ್ರಕ್ಕೆ ದೊಡ್ಡಗ್ರಾಮವಾಗಿದ್ದು, ಪರಿಶಿಷ್ಟ ಜಾತಿ, ವರ್ಗ ಹಾಗೂ ಪಂಗಡದವರು ಹೆಚ್ಚಾಗಿ ವಾಸಿ ಸುವ ಈ ಗ್ರಾಮಕ್ಕೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುತ್ತಿದೆ ಎಂದು ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ತಿಳಿಸಿದರು.

ತಾಲೂಕಿನ ಹೊಂಗನೂರು ಗ್ರಾಮದಲ್ಲಿ ಎಸ್ಇಪಿ ಯೋಜನೆಯಡಿಯಲ್ಲಿ 33 ಲಕ್ಷ ರೂ. ವೆಚ್ಚದಲ್ಲಿ ಪರಿಶಿಷ್ಟ ಸಮುದಾಯವರು ವಾಸಿಸುತ್ತಿರುವ ಬೀದಿಗಳ ಸಿಮೆಂಟ್ ರಸ್ತೆ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಗ್ರಾಮದ ಹೊಸ ಬಡಾವಣೆಗಳಿಗೆ ಸಮರ್ಪಕ ಕುಡಿಯುವ ನೀರು, ಚರಂಡಿ ಹಾಗೂಸ್ವಚ್ಛತೆಗೆ ಹೆಚ್ಚಿನ ಅದ್ಯತೆ ನೀಡಲಾಗುತ್ತದೆ. ಗ್ರಾಮಸ್ಥರ ಮನವಿಯಂತೆ ಕುಡಿಯುವ ನೀರಿನ ಪೈಪ್ಲೈನ್ ಅಳವಡಿಸಿ ಶುದ್ಧ ಕುಡಿಯುವ ನೀರು ಕಲ್ಪಿಸಲಾಗುತ್ತದೆ ಎಂದರು. ಈಗಾಗಲೇ ಬೋರ್ವೆಲ್ ಗಳಲ್ಲಿ ಅಂತರ್ಜಲ ಕುಸಿದಿಂದ ಎಲ್ಲಾ ಬಡಾವಣೆ ಗಳಿಗೂ ನೀರು ತುಂಬಿಸಲು ಸಾಧ್ಯವಾಗುತ್ತಿಲ್ಲ. ಮತ್ತೊಂದು ಬೋರ್ ಕೊರೆಯಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಈಗಾಗಲೇ ಗ್ರಾಮದ ಮುಖ್ಯ ರಸ್ತೆ ಅಭಿವೃದ್ಧಿಗೂ ಲೋಕೋಪಯೋಗಿ ಇಲಾಖೆಯಿಂದ ಗುದ್ದಲಿಪೂಜೆ ನೆರವೇರಿಸಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ಗ್ರಾಮದ ಮುಖಂಡರಾದ ಆರ್. ಮಹದೇವ್, ಪುಟ್ಟಸ್ವಾಮಿ, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಮಹದೇವಸ್ವಾಮಿ ಎಚ್ ಆರ್. ಶಂಕರ್, ಮಣ ಕಂಠ, ಎಸ್.ಎಂ ಮಹದೇವ್, ಕಂದಹಳ್ಳಿ ನಂಜುಂಡಸ್ವಾಮಿ ಎಇಇ ಚಿಕ್ಕಲಿಂಗಯ್ಯ, ಶಾಂತಮ್ಮ, ನಂಜುಂಡಯ್ಯ, ಚಿನ್ನಸ್ವಾಮಿ ,ಸುರೇಶ್, ರಘು, ನವೀನ, ಲೋಕೇಶ್, ಆರ್. ಮಹೇವಸ್ವಾಮಿ, ಎಚ್. ಎಂ. ಮಹದೇವಯ್ಯ, ಗ್ರಾಮಸ್ಥರು, ಮುಖಂಡರು ಇದ್ದರು.

ತುರ್ತುವೇಳೆಯಲ್ಲಿ ಹಣ ಬಳಸಿ

ಜಿಲ್ಲಾಧಿಕಾರಿಗೆ ಡಿಸಿಎಂ ಡಾ. ಜಿ. ಪರಮೇಶ್ವರ ಸೂಚನೆ

ಜಾನುವಾರುಗಳ ರಕ್ಷಣೆ, ವನ್ಯಜೀವಿಗಳ ನಿರ್ವಹಣೆ

ಜಾನುವಾರುಗಳಿಗೆ ಕುಡಿಯುವ ನೀರು, ಕಾಲಕಾಲಕ್ಕೆ ಲಸಿಕೆ ಹಾಗೂ ಮೇವಿನ ಕೊರತೆಯಾಗದಂತೆ ಎಚ್ಚರ ವಹಿಸ ಬೇಕು. ನೀರಿನ ಮೂಲಗಳಿರುವ ರೈತರಿಗೆ ಮೇವಿನ ಬೀಜದ ಕಿಟ್ಟಗಳನ್ನು ವಿತರಿಸಿ ಮೇವು ಬೆಳೆಯಲು ಪ್ರೋತ್ಸಾಹಿಸ ಬೇಕು. ಬರದ ತೀವ್ರತೆಯಿಂದ ಕಾಡಿನಲ್ಲಿ ನೀರು ಮತ್ತು ಮೇವಿನ ಅಭಾವ ಸೃಷ್ಟಿಯಾಗಿ ಕಾಡುಪ್ರಾಣಿಗಳು ಜನವಸತಿ ಪ್ರದೇಶಗಳಿಗೆ ಬರುವ ಸಾಧ್ಯತೆಯಿದ್ದು, ಈ ಸಮಸ್ಯೆಗೆ ಈಗಿನಿಂದಲೇ ಸೂಕ್ತ ಪರಿಹಾರ ಕಂಡುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಚಾಮರಾಜನಗರ: ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಲಭ್ಯವಿರುವ ಅನುದಾನವನ್ನು ಸರ್ಕಾರದ ಮಾರ್ಗಸೂಚಿಯಂತೆ ಕುಡಿಯುವ ನೀರು ಮತ್ತು ಇತರೆ ತುರ್ತು ಪರಿಹಾರ ಕಾರ್ಯಗಳಿಗೆ ತಕ್ಷಣವೇ ಬಳಸಬೇಕು. ಅನುದಾನಕ್ಕಾಗಿ ಕಾಯುವ ನೆಪವೊಡ್ಡಿ ಪರಿಹಾರ ಕಾರ್ಯಗಳನ್ನು ವಿಳಂಬ ಮಾಡಬಾರದು ಎಂದು ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವ ಡಾ. ಜಿ. ಪರಮೇಶ್ವರ ಅಧಿಕಾರಿಗಳಿಗೆ ಸೂಚಿಸಿದರು. ಜೊತೆಗೆ, 'ವಿಬಿ ಜಿ ರಾಮ್ ಜಿ' ಯೋಜನೆಯಡಿ ಜನರಿಗೆ ಅಗತ್ಯ ಉದ್ಯೋಗ ಒದಗಿಸುವಂತೆ ಅವರು ನಿರ್ದೇಶನ ನೀಡಿದರು.

ಸಾಂಕ್ರಾಮಿಕ ರೋಗಗಳ ನಿಯಂತ್ರಣ ಹಾಗೂ ಮುನ್ನೆಚ್ಚರಿಕೆ

ನೀರಿನ ಕೊರತೆಯಿಂದ ಜನರು ನೀರನ್ನು ಶೇಖರಿಸಿಡುವುದರಿಂದ ಡೆಂಘಿ ಮತ್ತು ಚಿಕೂನ್ಗುನ್ಯಾದಂತಹ ಸಾಂಕ್ರಾಮಿಕ ರೋಗಗಳು ಹರಡುವ ಅಪಾಯವಿದೆ. ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವಾಗಲೂ ನೀರು ಹೆಚ್ಚು ಕಾಲ ನಿಲ್ಲದಂತೆ ಎಚ್ಚರಿಕೆ ವಹಿಸಬೇಕು. ಬರಗಾಲದಲ್ಲಿ ಕಲುಷಿತ ನೀರು ಸೇವನೆಯಿಂದ ಆಗುವ ಅನಾಹುತಗಳನ್ನು ತಪ್ಪಿಸಲು ನಿಗಾವಹಿಸಬೇಕು. ನಿಯಮಿತವಾಗಿ ಟಾಸ್ಕ್ ಫೋರ್ಸ್ ಹಾಗೂ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ನಡೆಸಿ ಜನರಿಗೆ ಜಾಗೃತಿ ಮೂಡಿಸಬೇಕು. ಅಲ್ಲದೆ, ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಔಷಧಗಳ ಸಂಗ್ರಹವಿರುವಂತೆ ನೋಡಿಕೊಳ್ಳಬೇಕು ಎಂದು ಅವರು ತಿಳಿಸಿದರು.

ಕೇಂದ್ರ ಸ್ಥಾನದಲ್ಲಿದ್ದು ಕೆಲಸ ಮಾಡಿ

ಎಲ್ನೀನೋ ಪ್ರಭಾವದಿಂದ ಅತ್ಯಂತ ಗಂಭೀರ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಗ್ರಾಮ ಪಂಚಾಯಿತಿಯಿಂದ ಹಿಡಿದು ಜಿಲ್ಲಾಮಟ್ಟದ ವರೆಗೆ ಎಲ್ಲ ಅಧಿಕಾರಿಗಳು ಜನಸಾಮಾನ್ಯರ ಬಳಿಗೆ ಹೋಗಿ ಸಮಸ್ಯೆ ಆಲಿಸಬೇಕು. ಬಹುತೇಕ ಅಧಿಕಾರಿಗಳು ತಮ್ಮ ಕೇಂದ್ರ ಸ್ಥಾನದಲ್ಲಿರದೆ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ದೂರುಗಳಿದ್ದು, ತಕ್ಷಣವೇ ಈ ಕಾರ್ಯವೈಖರಿಯನ್ನು ಬದಲಿಸಿಕೊಳ್ಳಬೇಕು. ಕೇಂದ್ರ ಸ್ಥಾನದಲ್ಲಿರದ ಅಧಿಕಾ ರಿಗಳ ವಿರುದ್ಧ ಯಾವುದೇ ಮುಲಾಜಿಲ್ಲದೆ ಕಠಿಣ ಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿಗಳಿಗೆ ಡಾ. ಜಿ. ಪರಮೇಶ್ವರ ಅವರು ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು.

ಅನಿಲ್ ಚಿಕ್ಕಮಾದುಗೆ ಸಚಿವ ಸ್ಥಾನ ನೀಡುವಂತೆ ಮನವಿ

ಎಚ್.ಡಿ.ಕೋಟೆ: ಎರಡನೇ ಅವಧಿಗೆ ಅತ್ಯಧಿಕ ಮತ ಗಳ ಅಂತರದಿಂದ ವಿಜಯ ಸಾಧಿಸಿರುವ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಸಚಿವ ಸ್ಥಾನ ನೀಡುವಂತೆ ಗ್ರಾ.ಪಂ ಮಾಜಿ ಸದಸ್ಯ ಎಚ್. ಚಿನ್ನನಾಯಕ (ಸೋಮಣ್ಣ) ಮನವಿ ಮಾಡಿದ್ದಾರೆ.

ಅನಿಲ್ ಚಿಕ್ಕಮಾದು, ಹಳೆ ಮೈಸೂರು ಪ್ರಾಂತ್ಯ ದಲ್ಲಿ ನಾಯಕ ಜನಾಂ ಗದ ಏಕೈಕ ಶಾಸಕ ರಿದ್ದಾರೆ. ಈವರೆಗೂ ಪಕ್ಷ ನೀಡಿರುವ ಜವಾಬ್ದಾ ರಿಗಳನ್ನು ನಿಷ್ಠೆಯಿಂದ ನಿರ್ವಹಿಸಿದ್ದಾರೆ. ತಾಲೂ ಕಿನ ಅಭಿವೃದ್ಧಿ ದೃಷ್ಟಿಗೆ ಸಾಕಷ್ಟು ಅನುದಾನ ತಂದಿದ್ದಾರೆ. ಅವಳಿ ತಾಲೂಕುಗಳನ್ನು ಅಭಿವೃದ್ಧಿ ಪಡಿಸಲು ಇನ್ನಷ್ಟು ಅಧಿಕಾರದ ಶಕ್ತಿ ಬೇಕಿದೆ. ಆದ್ದರಿಂದ, ಕಾಂಗ್ರೆಸ್ ಹೈಕಮಾಂಡ್ ಸಚಿವ ಸ್ಥಾನ ನೀಡಬೇಕು. ಹಾಸನ, ಕೊಡಗು, ಮೈಸೂರು, ಚಾಮ ರಾಜನಗರ ಸೇರಿದಂತೆ ದಕ್ಷಿಣ ಕರ್ನಾಟಕದಲ್ಲಿರುವ ನಾಯಕ ಜನಾಂಗವನ್ನು ಒಗ್ಗೂಡಿಸಿಕೊಂಡು ಪಕ್ಷ ಸಂಘಟನೆಯನ್ನೂ ಮಾಡುತ್ತಿದ್ದಾರೆ. ಇತರೆ ಪಕ್ಷಗಳು ಆಪರೇಷನ್ ನಡೆಸಿದಾಗಲೂ ಪಕ್ಷದಿಂದ ಹೋಗದೆ ಪಕ್ಷ ನಿಷ್ಠೆ ತೋರಿದ್ದಾರೆ. ಈ ಎಲ್ಲ ಅಂಶಗಳನ್ನು ಗಮನಿಸಿಯೇ ಮಾಜಿ ಸಿಎಂ ಸಿದ್ದರಾಮಯ್ಯ ಕ್ಯಾಬಿನೆಟ್ ದರ್ಜೆ ಸ್ಥಾನ ನೀಡಿದ್ದರು.

ಮಧುಗಿರಿ ಕ್ಷೇತ್ರದ ಶಾಸಕ ಕೆ.ಎನ್.ರಾಜಣ್ಣ ಹಾಗೂ ಡಿ.ಕೆ.ಶಿವಕುಮಾರ್ ಸಚಿವ ಸಂಪುಟದ ಬಿ.ನಾಗೇಂದ್ರ ಸ್ಥಾನ ತೆರವಾಗಿದ್ದು, ಈ ವರೆಗೂ ಭರ್ತಿಯಾಗಿಲ್ಲ. ಇದರಿಂದ ಸಮಾಜಕ್ಕೆ ಅನ್ಯಾಯ ವಾಗಿದೆ. ಶಾಸಕ ಅನಿಲ್ ಚಿಕ್ಕಮಾದುಗೆ ಮಂತ್ರಿಸ್ಥಾನ ನೀಡಿ, ದಕ್ಷಿಣ ಕರ್ನಾಟಕ ಹಾಗೂ ನಾಯಕ ಸಮಾ ಜಕ್ಕೆ ಕಾಂಗ್ರೆಸ್ ಹೈಕಮಾಂಡ್ ನ್ಯಾಯಕೊಡಬೇಕು ಎಂದು ಮನವಿ ಮಾಡಿದ್ದಾರೆ.

ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನ ಯಶಸ್ವಿಗೆ ಸಹಕಾರ ಅಗತ್ಯ: ಎ.ಆರ್.ಕೃಷ್ಣಮೂರ್ತಿ

ಚಾಮರಾಜನಗರ: ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನ ನಿಮಿತ್ತವಾಗಿ ಅಂತಾರಾಷ್ಟ್ರೀಯ ಬೌದ್ಧ ಮಹಾಸಮ್ಮೇಳನ ಸಮಿತಿ, ಬಿಕ್ಕು ಸಂಘ, ಭಾರತೀಯ ಬೌದ್ಧ ಮಹಾ ಸಭಾದ ವತಿಯಿಂದ ಹಮ್ಮಿಕೊಂಡಿರುವ

ಧಮ್ಮ ಪಯಣ ಜಾಗೃತಿ ಜಾಥ ಟ್ಯಾಬ್ಲೋ ಗಳಿಗೆ ಬೌದ್ಧ ಬಿಕ್ಕುಗಳು, ಶಾಸಕ ಎ.ಆರ್.ಕೃಷ್ಣಮೂರ್ತಿ ಚಾಲನೆ ನೀಡಿದರು. ರಾಮಸಮುದ್ರ ಗ್ರಾಮದ ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಧಮ್ಮ ಪಯಣ ಜಾಗೃತಿ ಜಾಥ ಟ್ಯಾಬ್ಲೋಗಳಿಗೆ ಚಾಲನೆ ದೊರೆತು, ಬಿ ರಾಚಯ್ಯ ಜೋಡಿರಸ್ತೆ, ಡಿವಿಯೇಷನ್, ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಮಾರ್ಗವಾಗಿ – ಗುಂಡ್ಲುಪೇಟೆ ವೃತ್ತ, ಸುಲ್ತಾನ್ ಶರೀಫ್ ವೃತ್ತ, ಸತ್ತಿ ರಸ್ತೆಯ ಮೂಲಕ ಅಂಬೇಡ್ಕರ್ ಭವನವನ್ನು ತಲುಪಿತು.

ಧಮ್ಮ ಪಯಣ ಜಾಗೃತಿ ಜಾಥ ಟ್ಯಾಬ್ಲೋ ಗಳಿಗೆ ಚಾಲನೆ ನೀಡಿದ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಅಕ್ಟೋಬರ್ 24 ಮತ್ತು 25 ರಂದು ನಡೆಯುವ ವಿಶ್ವ ಬೌದ್ಧ ಸಮ್ಮೇಳನ ಪ್ರಯುಕ್ತ ವಾಗಿ ಜಿಲ್ಲೆಯ ಪ್ರತಿ ವಿಧಾನಸಭಾ ಕ್ಷೇತ್ರವಾರು ಬುದ್ಧ, ಅಂಬೇಡ್ಕರ್ ಟ್ಯಾಬ್ಲೋ ಗಳಿಗೆ ರಾಮನಮುದ್ರದ ಅಂಬೇಡ್ಕರ್ ಪುತ್ಥಳಿಗೆ. ಮಾಲಾ ರ್ಪಣೆ ಮಾಡಿ ಚಾಲನೆ ನೀಡಲಾಗಿದೆ. ಬೌದ್ಧಸಮ್ಮೇಳನಕ್ಕೆ ಇನ್ನೂ 50 ದಿನಗಳು ಮಾತ್ರ ಬಾಕಿ ಉಳಿದಿದೆ. ತಾವೆಲ್ಲರೂ ಹೆಚ್ಚಿನ ರೀತಿಯಲ್ಲಿ ಸಹಕರಿಸಿ ಧಮ್ಮದಾನ ಮಾಡುವ ಮುಖಾಂತರ ಸಮ್ಮೇಳನ ಯಶಸ್ವಿಯಾಗಲು ಸಹಕರಿಸಬೇಕು ಎಂದು ಮನವಿ ಮಾಡಿದರು.

ಧಮ್ಮ ಪಯಣ ನಾಲ್ಕು ವಾಹನಗಳು ಜಿಲ್ಲೆಯ

ನಾಲ್ಕು ವಿಧಾನಸಭಾ ಕ್ಷೇತ್ರದ ಪ್ರತಿಗ್ರಾಮಕ್ಕೂ ಪಯಣ ಮಾಡಿ ಸಮ್ಮೇಳನಕ್ಕೆ ಗ್ರಾಮದ ಯಜಮಾನರು, ಮುಖಂಡರು, ಸಮುದಾಯದ ಜನರು, ಅಂಬೇಡ್ಕರ್ ಸಂಘಟನೆ ಅಧ್ಯಕ್ಷರು, ಪದಾಧಿಕಾರಿಗಳನ್ನು ಗ್ರಾಮದವರನ್ನು ಆಹ್ವಾನ ಮಾಡುವುದು ಧಮ್ಮ ಪಯಣದ ಉದ್ದೇಶವಾಗಿದೆ ಪ್ರತಿ ರಾತ್ರಿ ಆಯಾ ಗ್ರಾಮಗಳಲ್ಲಿ ವಾಸ್ತವ್ಯ ಮಾಡುತ್ತಾರೆ. ಅಲ್ಲಿಯ ಗ್ರಾಮಸ್ಥರು ಮೊಂಬತ್ತಿ ಮೆರವಣಿಗೆಯೊಂದಿಗೆ ಸ್ವಾಗತ ಮಾಡಿ ತಮ್ಮ ತನುಮನ.ಧನ ಅರ್ಪಿಸುವ ಮೂಲಕ ಸಮ್ಮೇಳನ ಯಶಸ್ಸಿ ಸಹಕರಿ ಮೈಸೂರಿನಲ್ಲಿ ಎಷ್ಟು ಯಶಸ್ವಿಯಾಯಿತು ಅದಕ್ಕಿಂತ ಹೆಚ್ಚಿ

ಅಭಿಮನ್ಯುವಿಗೆ ನಗರದಲ್ಲಿ ಗೌರವ ಬೀಳ್ಕೊಡುಗೆಗೆ ಆಗ್ರಹ

ಮೈಸೂರು: ವಿಶ್ವವಿಖ್ಯಾತ ದಸರಾ ಮಹೋತ್ಸವದಲ್ಲಿ ಹಲವು ವರ್ಷಗಳ ಕಾಲ ಯಶಸ್ವಿಯಾಗಿ ಅಂಬಾರಿ ಹೊತ್ತು ನಿವೃತ್ತಿಯಾಗಿರುವ ಕ್ಯಾಪ್ಟನ್ ಅಭಿಮನ್ಯು ಆನೆಯನ್ನು ಮೈಸೂರಿಗೆ ಕರೆತಂದು ಜಂಬೂ ಸವಾರಿಯಲ್ಲಿ ಗೌರವಾನ್ವಿತ ಬೀಳ್ಕೊಡುಗೆ ನೀಡುವಂತೆ ಆಗ್ರಹಿಸಿ ಗಂಧದಗುಡಿ ಫೌಂಡೇಶನ್ ವತಿಯಿಂದ ಅರಣ್ಯ ಭವನದ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಬಲ್ಲಾಳ ವೃತ್ತದಿಂದ ಅಶೋಕಪುರಂನಲ್ಲಿರುವ ಅರಣ್ಯ ಭವನದವರೆಗೆ ಜಾಥಾ ನಡೆಸಿ, ಅಭಿಮನ್ಯುವಿನ ಪರ ಘೋಷಣೆ ಕೂಗಿ ದಸರಾಗೆ ಕರೆತರುವಂತೆ ಆಗ್ರಹಿಸಿದರು. ಕ್ಯಾಪ್ಟನ್ ಅಭಿಮನ್ಯು ಕಳೆದ 25 ವರ್ಷಗಳಿಂದ ಅರಣ್ಯ ಇಲಾಖೆಯಲ್ಲಿ ನಿರಂತರ ಸೇವೆ ಸಲ್ಲಿಸಿದ್ದು, ಸುಮಾರು 6 ಬಾರಿ ತಾಯಿ ಚಾಮುಂಡೇಶ್ವರಿಯ ಚಿನ್ನದ ಅಂಬಾರಿಯನ್ನು ಹೊತ್ತು ಜನಮೆಚ್ಚುಗೆ ಗಳಿಸಿದೆ. ಅಲ್ಲದೆ, 300ಕ್ಕೂ ಹೆಚ್ಚು ಕಾಡಾನೆಗಳ ಸೆರೆ ಕಾರ್ಯಾಚರಣೆ, 80ಕ್ಕೂ ಹೆಚ್ಚು ಹುಲಿ ಸೆರೆ ಕಾರ್ಯಾಚರಣೆಗಳಲ್ಲಿ ಪ್ರಮುಖ ಕುಮ್ಕಿ ಆನೆಯಾಗಿ ಭಾಗವಹಿಸಿದ ಹೆಗ್ಗಳಿಕೆ ಅಭಿಮನ್ಯುವಿನದ್ದಾಗಿದೆ. ಹೀಗಾಗಿ ಈ ಬಾರಿಯ ದಸರಾ ಮಹೋತ್ಸವದಲ್ಲಿ ತಾಯಿ ಚಾಮುಂಡೇಶ್ವರಿ ದೇವಿಯ ಸಮ್ಮುಖದಲ್ಲೇ ಅಭಿಮನ್ಯುಗೆ ಪುಷ್ಪಾರ್ಚನೆ ಮಾಡಿ, ಗೌರವಾನ್ವಿತ ಬೀಳ್ಕೊಡುಗೆ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಗಂಧದಗುಡಿ ಫೌಂಡೇಶನ್ ರಾಜ್ಯಾಧ್ಯಕ್ಷ ಆರ್ಯನ್ ಗಂಧದಗುಡಿ, ಸತೀಶ್.ಆರ್, ಮೋಹನ್ ರಾಜ್, ಯಶೋಧ.ಆರ್, ಅರ್ಜುನ್ ಪಾರ್ಥ, ಅನಿತಾ ಪಿ. ಜಯರಾಮ್, ಮಾದೇವ್ ಶೆಟ್ಟಿ, ಅಪ್ಪು ಅಕ್ಷಯ್, ಸ್ಮಿತಾ, ಜಗದೀಶ್, ಆದರ್ಶ ಕರುನಾಡು, ನಂದೀಶ್ ಕದಂಬ, ಡಾ.ಬಿ.ಆರ್.ತೀರ್ಥಲಿಂಗಪ್ಪ, ಪೂರ್ಣಿಮಾ ಸೇರಿ ಹಲವರು ಭಾಗವಹಿಸಿದ್ದರು.

ಮೊಬೈಲ್ ಬಗ್ಗೆ ಎಚ್ಚರವಿರಲಿ

ಎಸ್‌ಐ ವನಜಾಕ್ಷಿ ಎಚ್ಚರಿಕೆ । ಮಹಿಳಾ ವಿಚಾರಗೋಷ್ಠಿ

ರಾಮನಗರ: ಕೈನಲ್ಲಿ ಮೊಬೈಲ್ ಇದೆ ಎಂದು ಬೇಡದ ಆ್ಯಪ್‌ಗಳನ್ನು ಅಳವಡಿಸಿಕೊಳ್ಳವುದು, ಗೊತ್ತಿಲ್ಲದ ಲಿಂಕ್‌ಗಳನ್ನು ಒತ್ತಿ ಹಣ ಕಳೆದುಕೊಳ್ಳುತ್ತಿರುವ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ. ಆದಕಾರಣ ಸೈಬರ್ ಕ್ರೈಂ ಬಗ್ಗೆಯೂ ತಿಳುವಳಿಕೆ ಇರಲಿ, ಮೋಸಕ್ಕೆ ಬಲಿಯಾಗಬೇಡಿ, ಮೊಬೈಲ್ ಬಳಕೆಯಲ್ಲಿ ಎಚ್ಚರವಿರಲಿ ಎಂದು ರಾಮನಗರ ಸೈಬರ್ ಕ್ರೈಂ ಠಾಣೆ ಎಸ್‌ಐ ವನಜಾಕ್ಷಿ ಎಚ್ಚರಿಸಿದರು.

ರಾಮನಗರದ ವಡೇರಹಳ್ಳಿ ರೈತ ಸಮುದಾಯ ಭವನದಲ್ಲಿ ಬುಧವಾರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಡಿ ನಡೆದ ತಾಲ್ಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ ಉದ್ಘಾಟಿಸಿ ಅವರು ಮಾತನಾಡಿದರು.

ಜ್ಞಾನ ವಿಕಾಸ ಕೇಂದ್ರದ ಬಗ್ಗೆ ಮೆಚ್ಚುಗೆ

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ವಿಭೂತಿಕೆರೆ ಶಿವಲಿಂಗಯ್ಯ ಮಾತನಾಡಿ ಮಹಿಳೆಯರಲ್ಲಿ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ತಿಳುವಳಿಕೆ ಮೂಡಿಸುವಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನ ವಿಕಾಸ ಕೇಂದ್ರದ ಕಾರ್ಯ ಪ್ರಶಂಸನೀಯ ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ನಾಣ್ನುಡಿಯಂತೆ ಮಹಿಳೆಯರು ಇಂದು ಉನ್ನತ ಶಿಕ್ಷಣ ಪಡೆದು ಎಲ್ಲಾ ರಂಗದಲ್ಲೂ ಛಾಪು ಮೂಡಿಸಿದ್ದಾರೆ, ಕುಟುಂಬ ನಿರ್ವಹಣೆಯ ಹೊಣೆಯನ್ನು ಹೊತ್ತಿದ್ದಾರೆ ಎಂದು ಮಹಿಳೆಯರ ಪ್ರಗತಿಯ ಬಗ್ಗೆ ಮಾತನಾಡಿದರು. ಬಸವೇಶ್ವರ ಜ್ಞಾನವಿಕಾಸ ಕೇಂದ್ರದ ವಿಜಯಲಕ್ಷ್ಮೀ, ಜಿಲ್ಲಾ ನಿರ್ದೇಶಕ ಬಿ. ಧಿಕಾರಿ ವಿ.ಸಿ. ಚಂದ್ರೇಗೌಡ ಮಾತನಾಡಿದರು. ಬೆಂಗಳೂರಿನ ಸ್ಪರ್ಷ ಆಸ್ಪತ್ರೆ ವೈದ್ಯ ಡಾ. ಹೆಚ್.ಪಿ. ಹೇಮಂತ್ ಮಹಿಳೆಯರಲ್ಲಿ ಕಂಡುಬರುವ ಸ್ಥೂಲಕಾಯ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿದರೆ ಸೈಬರ್ ಠಾಣೆ ಪೋಲಿಸ್ ಪುರುಷೋತ್ತಮ್ ಸೈಬರ್ ಕ್ರೈಂಗಳ ಬಗ್ಗೆ ಮಾಹಿತಿ ಮತ್ತು ತಿಳುವಳಿಕೆ ನೀಡಿದರು. ಜ್ಞಾನ ವಿಕಾಸ ಕೇಂದ್ರದ ವಾರ್ಷಿಕೋತ್ಸವದ ಅಂಗವಾಗಿ ನಡೆದ ರಂಗೋಲಿ ಸ್ಪರ್ಧೆ, ಹೂಗುಚ್ಚ ಸ್ಪರ್ಧೆ, ಆರತಿ ತಟ್ಟೆ ಅಲಂಕಾರ, ಮತ್ತಿತರ ಸಾಂಸ್ಕೃತಿಕ, ಕ್ರೀಡಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಅವಿಭಕ್ತ ಕುಟುಂಬ ಸಂಸ್ಕೃತಿ ಮಾಯ

ವೃದ್ಧಿ ಯೋಜನೆಯ ಜ್ಞಾನ ವಿಕಾಸ ಕೇಂದ್ರದ ಜಯಕರ ಶೆಟ್ಟಿ, ಯೋಜನಾಧಿಕಾರಿ ಮುರಳೀಧರ್, ಸೈಬರ್ ಠಾಣೆ ಪೋಲಿಸ್ ಪುರುಷೋತ್ತಮ್, ಜ್ಞಾನವಿಕಾಸ ಸಮನ್ವಯಾಧಿಕಾರಿ ಉಷಾ ಕಲ್ಯಾಣಿ, ಆಂತರಿಕ ಲೆಕ್ಕ ಪರಿಶೋಷಧಕ ಸುಂದರ್, ನೋಡಲ್ ಅಧಿಕಾರಿ ಅರವಿಂದ್, ಪ್ರಾದೇಶಿಕ ಯೋಜನಾಧಿಕಾರಿ ಮುಕಾಂಭಿಕಾ ಸೇವಾ ಪ್ರತಿನಿಧಿಗಳಾದ ಜಮುನಾರಾಣಿ, ಶೋಭಾ, ಅರ್ಪಿತಾ, ಅನಿತಾ, ಸುನಿತಾ, ಮಹದೇವಮ್ಮ, ಸುವರ್ಣ, ಶೋಭಾ, ಈರಮಾಸ್ತಮ್ಮ, ಮುಂತಾದವರಿದ್ದರು.

ಬಾಲ್ಯ ವಿವಾಹ ಅಪರಾಧ

ಬಾಲ್ಯ ವಿವಾಹ ಕಾನೂನು ಪ್ರಕಾರ ಅಪರಾದವಾಗಿದೆ. ಬಾಲ್ಯ ವಿವಾಹ ನಡೆಸುವ ಮಕ್ಕಳ ತಂದೆ ತಾಯಿಗಳು, ಮದುವೆಯಲ್ಲಿ ಪಾಲ್ಗೊಂಡವರು, ಬಾಲ್ಯ ವಿವಾಹಕ್ಕೆ ಪ್ರೇರೇಪಣೆ ನೀಡುವವರು ಕೂಡ ಅಪರಾಧಿಗಳಾಗುತ್ತಾರೆ ಆದ್ದರಿಂದ ಯಾರೂ ಕೂಡ ಬಾಲ್ಯ ವಿವಾಹಕ್ಕೆ ಪ್ರೇರಣೆ ಕೊಡಬಾರದು. ಇದರಿಂದ ಹೆಣ್ಣು ಮಕ್ಕಳ ಭವಿಷ್ಯ ಬೇರಿನಲ್ಲೇ ನಾಶವಾಗುತ್ತದೆ ಎಂದು ಮತ್ತೊಂದು ಎಚ್ಚರಿಕೆ ನೀಡಿದರು. ಹೆಣ್ಣುಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿದರೆ ಅವರು ಹೆಣ್ಣು ಮತ್ತಷ್ಟು ಗಟ್ಟಿಯಾಗುತ್ತಾರೆ ಎಂದರು.

ವಂಡರ್‌ಲಾ: ಈಗ ಅಂತರ ಕಾಲೇಜು ಕದನ ಭೂಮಿ!

ರಾಮನಗರ: ಬಿಡದಿ–ಬೆಂಗಳೂರು ನಡುವೆ ಇರುವ ವಂಡರ್‌ಲಾ ಅಮ್ಯೂಸ್‌ಮೆಂಟ್ ಪಾರ್ಕ್‌ನಲ್ಲಿ ಕಾಲೇಜು ವಿದ್ಯಾರ್ಥಿಗಳಿಗಾಗಿ 'ವಂಡರ್‌ಲಾ ಆಫ್ ಕ್ಯಾಂಪಸ್' ಎಂಬ ರೋಚಕ ಅಂತರ್‌ಕಾಲೇಜು ಕಾರ್ಯಕ್ರಮ ಆಯೋಜಿಸಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡಿರುವ ಸಂಸ್ಥೆ, ಈ ಅಭಿಯಾನವು ಇಡೀ ಋತುವಿನಾದ್ಯಂತ ನಡೆಯುವ ಸ್ಪರ್ಧಾತ್ಮಕ ವೇದಿಕೆಯಾಗಿರಲಿದೆ. 2026ರ ಆಗಸ್ಟ್ 5ರಿಂದ ಸೆಪ್ಟೆಂಬರ್ 11ರವರೆಗೆ ನಡೆಯಲಿರುವ ಈ ಅಭಿಯಾನದಲ್ಲಿ ನಗರದಾದ್ಯಂತದ ಕಾಲೇಜುಗಳು 'ವಂಡರ್‌ಲಾ ಆಫ್–ಕ್ಯಾಂಪಸ್ ಲೀಗ್' (ಫಔಅಐಪ)ನಲ್ಲಿ ಪರಸ್ಪರ ಮುಖಾಮುಖಿಯಾಗಲಿವೆ. ಅಮ್ಯೂಸ್‌ಮೆಂಟ್ ಪಾರ್ಕ್‌ನ ರೋಚಕ ರೈಡ್‌ಗಳ ಉತ್ಸಾಹವನ್ನು ಕ್ಯಾಂಪಸ್ ನಡುವಿನ ಪೈಪೋಟಿಯ ಮನೋಭಾವದೊಂದಿಗೆ ಬೆಸೆಯುವ ಈ ಲೀಗ್‌ನಲ್ಲಿ ಪ್ರತಿದಿನ ಅಂಕಗಳಿಗಾಗಿ ರೋಚಕ ಸ್ಪರ್ಧೆ ನಡೆಯಲಿದೆ.

ವಂಡರ್‌ಲಾ ಆಫ್ ಕ್ಯಾಂಪಸ್ ಲೀಗ್ ಐದು ವಾರಗಳ ಕಾಲ ನಡೆಯಲಿದ್ದು, ವಂಡರ್‌ಲಾದ ವಿಶಿ? ರೈಡ್‌ಗಳು ಮತ್ತು ಆಕ?ರ್ಷಣೆಗಳನ್ನು ಆಧರಿಸಿದ ವೈಯಕ್ತಿಕ ಹಾಗೂ ತಂಡದ ಸವಾಲುಗಳ ಮೂಲಕ ಬೆಂಗಳೂರಿನ ವಿವಿಧ ಕಾಲೇಜುಗಳು ಪರಸ್ಪರ ಸ್ಪರ್ಧಿಸಲಿವೆ. ಸ್ಪರ್ಧೆಯ ಉತ್ಸಾಹ ಮತ್ತು ಒಂದು ದಿನದ ಮೋಜಿನ ಅನುಭವವನ್ನು ಒಟ್ಟುಗೂಡಿಸುವ ಈ ಅಭಿಯಾನವು ಬೆಂಗಳೂರಿನ ಯುವಜನತೆಯನ್ನು ಒಂದೇ ವೇದಿಕೆಯಲ್ಲಿ ಸೇರಿಸಲಿದೆ. ಪ್ರತಿ ಭೇಟಿ, ಪ್ರತಿ ಸವಾಲು ಮತ್ತು ಪ್ರತಿ ಅಂಕವೂ ಬೆಂಗಳೂರಿನ ಅಂತಿಮ ಕಾಲೇಜು ಚಾಂಪಿಯನ್ ಪಟ್ಟವನ್ನು ಅಲಂಕರಿಸುವ ಮಹತ್ವದ ಗುರಿಯತ್ತ ಕೊಂಡೊಯ್ಯುವಂತೆ ಫಔಅಐ ಈ ಸ್ಪರ್ಧಾತ್ಮಕ ಮನೋಭಾವಕ್ಕೆ ಮತ್ತ?ಟ್ಟ ಉತ್ಸಾಹ ತುಂಬಲಿದೆ. ಪಾರ್ಕ್‌ಗೆ ಪ್ರವೇಶಿಸಲು ವಿದ್ಯಾರ್ಥಿಗಳು ಮಾನ್ಯವಾದ ಕಾಲೇಜು ಗುರುತಿನ ಚೀಟಿಯನ್ನು ಹೊಂದಿರಬೇಕು. ಕಾಲೇಜು ಗುರುತಿನ ಚೀಟಿ ಹೊಂದಿರುವ ವಿದ್ಯಾರ್ಥಿಗಳಿಗೆ ಸಾಮಾನ್ಯ ಪಾರ್ಕ್ ಪ್ರವೇಶ ಶುಲ್ಕದ ಮೇಲೆ 30% ರಿಯಾಯಿತಿ ಕೂಡ ದೊರೆಯಲಿದೆ. ಫಔಅಐಗೆ ನೋಂದಣಿ ಪ್ರಕ್ರಿಯೆ ಪಾರ್ಕ್‌ನಲ್ಲಿಯೇ ನಡೆಯಲಿದ್ದು, ವಿದ್ಯಾರ್ಥಿಗಳು ವೈಯಕ್ತಿಕವಾಗಿ ಅಥವಾ ಗುಂಪಿನೊಂದಿಗೆ ಭಾಗವಹಿಸುವ ಆಯ್ಕೆಯನ್ನು ಹೊಂದಿರುತ್ತಾರೆ. ಇದರ ಜೊತೆಗೆ, ಪಾರ್ಕ್‌ಗೆ ಪ್ರವೇಶಿಸುವುದಕ್ಕೂ ಸ್ಕೋರ್‌ಬೋರ್ಡ್‌ನಲ್ಲಿ ಅಂಕಗಳು ಸೇರ್ಪಡೆಯಾಗಲಿದ್ದು, ಇದರಿಂದ ಗೆದ್ದ ಸವಾಲುಗಳು ಮಾತ್ರವಲ್ಲದೆ ಪ್ರತಿ ಭೇಟಿಯೂ ಮಹತ್ವ ಪಡೆಯಲಿದೆ ಎಂದು ಪ್ರಕಟನೆ ತಿಳಿಸಿದೆ.

ಸರಗೂರು ಮಾರ್ಗ ಬದಲಿ ಬಸ್

ಶಿವಕುಮಾರ ತುಂಬಸೋಗೆ

ಎಚ್.ಡಿ.ಕೋಟೆ: ಸರಗೂರು ಮಾರ್ಗ ಸಂಚರಿಸುತ್ತಿದ್ದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಎಚ್.ಡಿ.ಕೋಟೆ ಘಟಕದ ಕೆಎ–57 ಇ–0093 ಡಕೋಟಾ ಬಸ್ಸನ್ನು ತೆಗೆದು, ಸಂಚಾರಕ್ಕೆ ಯೋಗ್ಯವಾದ ಬಸ್ಸನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

ಬಿಎಂಟಿಸಿಗೆ ಸೇರಿದ್ದ ಸಾರಿಗೆ ಬಸ್ಸನ್ನು ಕೋಟೆ ಡಿಪೋಗೆ ಕೆಲ ವರ್ಷಗಳ ಹಿಂದೆ ಹಸ್ತಾಂತರಿಸಲಾಗಿತ್ತು. ಬಾಗಿಲು, ಕಿಟಕಿಯಿಲ್ಲದೆ, ಬಸ್ಸೊಳಗಿನ ಪಾದಚಾರಿ ಮಾರ್ಗ ಕಿತ್ತಿದ್ದ, ಧೂಳು ತುಂಬಿ ಪ್ರಯಾಣಿಕರ ಅನಾರೋಗ್ಯಕ್ಕೂ ಈ ಬಸ್ಸು ಕಾರಣವಾಗಿತ್ತು. ಬಸ್ಸಿನ ಅವ್ಯವಸ್ಥೆ ಬಗ್ಗೆ ವರ್ತಮಾನ ದಿನಪತ್ರಿಕೆ ಸೆ.1ರಂದು ಸುರಕ್ಷತೆಯಿಲ್ಲದ ಸಾರಿಗೆ ಬಸ್ಸುಗಳು ಎಂಬ ಶೀರ್ಷಿಕೆಯಲ್ಲಿ ವರದಿ ಪ್ರಕಟಿಸಿತ್ತು. ಪರಿಣಾಮ ಪ್ರಯಾಣಿಕರಿಗೆ ಸುರಕ್ಷತೆಯಿಲ್ಲದ ಬಸ್ ಅನ್ನು ಡಿಪೋದಲ್ಲಿರಿಸಿ, ಬದಲಿ ಬಸ್ಸನ್ನು ಬಿಡಲಾಗಿದೆ.

ವರ್ತಮಾನ ವರದಿ ಪರಿಣಾಮ

ಗದ್ದಿಗೆ ಮಾರ್ಗಕ್ಕೂ ಬದಲಿ ವ್ಯವಸ್ಥೆ

ಸೆ.2ರ ವರದಿಯಲ್ಲಿ ಡಕೋಟಾ ಬಸ್ಸುಗಳನ್ನು ರಸ್ತೆಗೆ ಇಳಿಸುತ್ತಿರುವ ಅಧಿಕಾರಿಗಳು ಎಂಬ ತಲೆ ಬರಹದಡಿಯ ಸುದ್ದಿಯಲ್ಲಿ ಹೆಚ್.ಡಿ. ಕೋಟೆ–ಗದ್ದಿಗೆ ಮಾರ್ಗದಲ್ಲಿ ವಾರಕ್ಕೆ ಎರ ಡ್ಮೂರು ಬಾರಿ ಬಸ್ಸುಗಳು ಕೆಟ್ಟು ನಿಲ್ಲುತ್ತಿರುವುದನ್ನು ಉಲ್ಲೇಖಿಸಿ, ನಿಗದಿತ ಸಮಯಕ್ಕೆ ಪ್ರಯಾಣಿಕರು ತಲುಪದೆ, ತೊಂದರೆ ಪಡುತ್ತಿದ್ದ ಬಗ್ಗೆ ಪತ್ರಿಕೆಯಲ್ಲಿ ವರದಿ ಮಾಡಲಾಗಿತ್ತು. ಇದೀಗ, ಹಿಂದೆ ಶಿವಮೊಗ್ಗ ಮಾರ್ಗ ಸಂಚರಿಸುತ್ತಿದ್ದ ಕೆಎ–13, ಎಫ್–2329 ಸಂಖ್ಯೆಯ ಬಸ್ಸನ್ನು ಬುಧವಾರದಿಂದ ಈ ಮಾರ್ಗಕ್ಕೆ ನಿಯೋಜಿಸಲಾಗಿದೆ.

ಕಡವೆ ಬೇಟೆ: ಬೇಟೆಗಾರರು ಪರಾರಿ

ಚಾಮರಾಜನಗರ: ನಾಡ ಬಂದೂಕಿನಿಂದ ಕಡವೆ ಕೊಂದು ಮೂರು ಭಾಗ ಮಾಡಿ ಹೊತ್ತೊಯ್ಯುವಾಗ ಅರಣ್ಯ ಸಿಬ್ಬಂದಿ ಕಂಡು ಕಳ್ಳಬೇಟೆಗಾರರು ಪರಾರಿಯಾದ ಘಟನೆ ಹನೂರು ತಾಲೂಕಿನ ಉಡುತೊರೆಹಳ್ಳ ಡ್ಯಾಂ ಬಳಿ ಸೆಪ್ಟೆಂಬರ್ 1ರ ರಾತ್ರಿ ನಡೆದಿದೆ. ಈ ಬಗ್ಗೆ ಅರಣ್ಯ ಇಲಾಖೆ ಗುರುವಾರದಂದು ಪ್ರಕಟಣೆ ಮೂಲಕ ಮಾಹಿತಿ ನೀಡಿದೆ.

ಉಡುತೊರೆಹಳ್ಳ ಡ್ಯಾಂನ ಹಿನ್ನೀರಿನಲ್ಲಿ ಸೆ.1ರ ರಾತ್ರಿ ಅರಣ್ಯ ಸಿಬ್ಬಂದಿ ಗಸ್ತು ನಡೆಸುವಾಗ ನಾಲ್ವರು ಬೇಟೆಗಾರರು ನಾಡ ಬಂದೂಕು ಹಿಡಿದು ತಲೆ ಮೇಲೆ ಚೀಲ ಹೊತ್ತು ಬರುವುದನ್ನು ಕಂಡಿದ್ದಾರೆ. ಈ ವೇಳೆ, ಅಲರ್ಟ್ ಆದ ಕಳ್ಳಬೇಟೆಗಾರರು ಚೀಲ ಬಿಸಾಡಿ ಪರಾರಿಯಾಗಿದ್ದಾರೆ. ಚೀಲಗಳನ್ನು ಪರಿಶೀಲಿಸಿದಾಗ ಕಡವೆಯನ್ನು ನಾಡ ಬಂದೂಕಿನಿಂದ ಕೊಂದು ಮೂರು ಭಾಗಗಳಾಗಿ ಕತ್ತರಿಸಿ ಚೀಲಕ್ಕೆ ತುಂಬಿರುವುದು ಕಂಡು ಬಂದಿದೆ. ಸದ್ಯ, ಹನೂರು ವಲಯ ಸಿಬ್ಬಂದಿ ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದು ಶ್ವಾನದಳಬಳಸಿಕೊಂಡು ತನಿಖೆಗೆ ಇಳಿದಿದ್ದಾರೆ.

ಮುಂದುವರೆದ ಶೂಟೌಟ್ ತನಿಖೆ: ಕಾವೇರಿ ವನ್ಯ ಜೀವಿಧಾಮದಲ್ಲಿ ನಡೆದ ಶೂಟೌಟ್ ಪ್ರಕರಣ ಸಂಬಂಧ ಸಿಐಡಿ ಅಧಿಕಾರಿಗಳು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಶಿಲುಬೆಪುರ, ಕೊತ್ತನೂರು ಬೀಟ್‌ನಲ್ಲಿ ದುಷ್ಕರ್ಮಿಗಳು ಕಳ್ಳಬೇಟೆ ಶಿಬಿರಗಳನ್ನು ಬೂದಿಕೆರೆ ನಾಗಬೋಳಿ ಕಳ್ಳಬೇಟೆ ತಡೆ ಶಿಬಿರಗಳ ಮೇಲೆ ಜಿಲೆಟಿನ್ ಸ್ಫೋಟಗಳನ್ನು ಬಳಸಿ ನಾಶಪಡಿಸಿರುವ ಬಗ್ಗೆ ಕೂಲಂಕಷವಾಗಿ ಪ್ರತಿಯೊಂದು ವರದಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳಿಂದ ಹಾಗೂ ಸಿಬ್ಬಂದಿಗಳಿಂದ ಪಡೆಯುವ ಜೊತೆಗೆ ಸ್ಥಳ ಪರಿಶೀಲನೆ ನಡೆಸಿ ಮಾಹಿತಿ ಕಲೆಹಾಕುತ್ತಿದ್ದಾರೆ. ಈಗಾಗಲೇ ಸಿಐಡಿ ಅಧಿಕಾರಿಗಳು 4 ತಂಡಗಳಾಗಿ ವಿಂಗಡಣೆಗೊಂಡು ತನಿಖೆ ನಡೆಸುತ್ತಿದ್ದು, ಪೊಲೀಸ್? ಪ್ರಕರಣದ ದಾಖಲೆಗಳು ಹಾಗೂ ಅರಣ್ಯ ಇಲಾಖೆಯ ವರದಿಗಳನ್ನು ಆಧರಿಸಿ ವಿವಿಧ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ.

ಯುವ ಸಂಘಗಳಿಂದ ಸ್ವಾವಲಂಬಿ ಬದುಕು

ಹನೂರು: ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ನೂತನವಾಗಿ ನೋಂದಾವಣೆಗೊಂಡಿರುವ ಭಾರತ್ ಜೋಡೋ ಯುವ ಸಂಘಗಳ ಯುವಕ–ಯುವತಿಯರೊಂದಿಗೆ ಉಪಮುಖ್ಯಮಂತ್ರಿ, ಕಂದಾಯ ಸಚಿವ ಡಾ. ಜಿ. ಪರಮೇಶ್ವರ್ ಅವರು ನೇರ ಸಂವಾದ ನಡೆಸಿ, ಯುವಜನರಲ್ಲಿ ಹೊಸ ಹುರುಪು ತುಂಬಿದರು.

ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿ, ಯುವ ಸಂಘಗಳ ಮಹತ್ವ ಹಾಗೂ ಸರ್ಕಾರದ ಯೋಜನೆಗಳ ಕುರಿತು ವಿವರವಾಗಿ ತಿಳಿಸಿದರು. ಈ ವೇಳೆ ಮಾತನಾಡಿದ ಅವರು, ರಾಜ್ಯದಲ್ಲಿ ಯುವಕರನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ 10 ಸಾವಿರ ಭಾರತ್ ಜೋಡೋ ಯುವ ಸಂಘಗಳನ್ನು ಸ್ಥಾಪಿಸಲಾಗುತ್ತಿದೆ. ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಂದು ಸಂಘ, ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ನಾಲ್ಕು ಸಾವಿರ ಜನಸಂಖ್ಯೆಗೆ ಒಂದು ಸಂಘದಂತೆ ರಚನೆ ಮಾಡಲಾಗುತ್ತಿದೆ. ಈಗಾಗಲೇ ಸಾವಿರಾರು ಯುವಕ–ಯುವತಿಯರು ನೋಂದಣಿ ಮಾಡಿಸಿಕೊಂಡಿದ್ದಾರೆ ಎಂದರು. ಇದು ಕೇವಲ ಸಂಘವಲ್ಲ, ಯುವಕರ ಭವಿಷ್ಯ ರೂಪಿಸುವ ವೇದಿಕೆ ಎಂದು ಬಣ್ಣಿಸಿದರು. ಹನೂರು ತಾಲ್ಲೂಕು ಅತ್ಯಂತ ಹಿಂದುಳಿದ ಪ್ರದೇಶ. ಇಲ್ಲಿನ ಯುವಜನರು ಉದ್ಯೋಗಕ್ಕಾಗಿ ನಗರಗಳಿಗೆ ವಲಸೆ ಹೋಗುವುದನ್ನು ತಪ್ಪಿಸಿ, ತಮ್ಮ ಊರಿನಲ್ಲಿಯೇ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು. ಸರ್ಕಾರ ನಿಮ್ಮೊಂದಿಗೆ ಇದೆ ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಯುವಕ–ಯುವತಿಯರು ತಮ್ಮ ಸಮಸ್ಯೆಗಳು ಹಾಗೂ ಅನುಮಾನಗಳನ್ನು ನೇರವಾಗಿ ಉಪಮುಖ್ಯಮಂತ್ರಿಗಳ ಮುಂದಿಟ್ಟರು. ಇದಕ್ಕೆ ಡಾ. ಪರಮೇಶ್ವರ್ ಅವರು ಸಮಾಧಾನಕರವಾಗಿ ಉತ್ತರಿಸಿದರು. ಇದೆ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಪುಟ್ಟರಂಗಶೆಟ್ಟಿ, ಶಾಸಕರುಗಳಾದ ಎಂಆರ್ ಮಂಜುನಾಥ್, ಎ ಆರ್ ಕೃಷ್ಣ ಕೃಷ್ಣಮೂರ್ತಿ ದರ್ಶನ್ ಧ್ರುವ ನಾರಾಯಣ ಎಚ್‌ಎಸ್ ಗಣೇಶ್ ಪ್ರಸಾದ್, ಜಿಲ್ಲಾಧಿಕಾರಿ ಶ್ರೀ.ರೂಪ, ಸಿಇಓ ಮೊನಾರೋತ್, ಯೋಜನಾ ನಿರ್ದೇಶಕ ವೆಂಕಟೇಶ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ರೇಖಾ, ಸಮುದಾಯ ಸಂಘಟನಾಧಿಕಾರಿ ಚಂದ್ರ ಕುಮಾರ್ ಸಿಬ್ಬ

ಕಳಚಿದ ಕಸಾಪ ಕಳಸದ ಕೊಂಡಿ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಡ್ಡಿಕೆರೆ ಗೋಪಾಲ್ ನಿಧನ

ಮೈಸೂರು: ಕನ್ನಡ ಸಾಹಿತ್ಯ ಪರಿಷತ್ತು ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್(77) ಗುರುವಾರ ಬೆಳಿಗ್ಗೆ ಹೃದಯಾಘಾತದಿಂದ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ನಿಧನರಾದರು.

ಪತ್ನಿ ಡಾ.ಅನಸೂಯಾ ಗೋಪಾಲ್, ಪುತ್ರಿ ಮಾಲಾ, ಅಳಿಯ ಭವಾನಿಶಂಕರ್, ಮೊಮ್ಮಗಳು ಆದ್ಯಾ ಅವರನ್ನು ಅಗಲಿದ್ದಾರೆ. ಮಡ್ಡಿಕೆರೆ ಗೋಪಾಲ್ ಅವರ ಪಾರ್ಥಿವ ಶರೀರವನ್ನು ಉದಯಗಿರಿಯ ಅಂಚೆ ಕಚೇರಿ ಸಮೀಪವಿರುವ(ಪಿ.ಎಫ್. ಆಫೀಸ್ ರಸ್ತೆ) ಅವರ ನಿವಾಸದಲ್ಲಿ ಮಧ್ಯಾಹ್ನ 1.30ರವರೆಗೆ ಅಂತಿಮ ದರ್ಶನಕ್ಕೆ ಇಡಲಾಲಾಗಿತ್ತು. ಮಧ್ಯಾಹ್ನ 2ರಿಂದ 3ರವರೆಗೆ ವಿಜಯನಗರ ಮೊದಲ ಹಂತದ ಜಿಲ್ಲಾ ಕನ್ನಡ ಸಾಹಿತ್ಯ ಭವನಕ್ಕೆ ತಂದು ಕನ್ನಡ ತೇರಿನ ಗೌರವ ನೀಡಲಾಯಿತು. ಸಂಜೆ 4ರ ಸುಮಾರಿಗೆ ಚಾಮುಂಡಿಬೆಟ್ಟದ ಪಾದದ ಸಮೀಪದ ಸ್ಮಶಾನದಲ್ಲಿ ಅಂತಿಮ ಸಂಸ್ಕಾರ ನಡೆಸುವ ಮೂಲಕ ಪಂಚಭೂತಗಳಲ್ಲಿ ಲೀನವಾದರು.

ಚಿಕ್ಕಮಗಳೂರಿನ ಮೂಡಿಗೆರೆ ತಾಲ್ಲೂಕಿನ ಹಾಲಮ್ಮ ಹಾಗೂ ಸೋಮೇಗೌಡ ದಂಪತಿಗಳ ಐದು ಜನ ಮಕ್ಕಳಲ್ಲಿ ಎರಡನೆಯವರಾಗಿದ್ದ ಮಡ್ಡಿಕೆರೆ ಗೋಪಾಲ್ 1948ರಂದು ಸೆ.11ರಂದು ಜನಿಸಿದರು. ಬಾಲ್ಯ ಮಡ್ಡಿಕೆರೆಯಲ್ಲಿಯೇ ಕಳೆದು, ಗೌಡಹಳ್ಳಿ ಮತ್ತು ದಾರದಹಳ್ಳಿಯಲ್ಲಿ ಮಾಧ್ಯಮಿಕ ಶಿಕ್ಷಣ, ಮೂಡಿಗೆರೆ ಮತ್ತು ಚಿಕ್ಕಮಗಳೂರಿನಲ್ಲಿ ಪ್ರೌಢ ಮತ್ತು ಕಾಲೇಜು ವ್ಯಾಸಂಗ ಮುಗಿಸಿ, ಮೈಸೂರಿನಲ್ಲಿ ಕಾನೂನು ಪದವಿಯನ್ನು ಪೂರೈಸಿದರು. ಕಾಲೇಜಿನಲ್ಲಿದ್ದಾಗಿನಿಂದಲೇ ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆಲುವು ಪಡೆದು ತಮ್ಮ ನಾಯಕತ್ವ ಗುಣ ಬೆಳೆಸಿಕೊಂಡರು. ಕಾನೂನು ಪದವಿಯ ಜೊತೆಯಲ್ಲಿ ಪ್ರಿಂಟಿಂಗ್ ಟೆಕ್ನಾಲಜಿ ಮತ್ತು ಪತ್ರಿಕೋದ್ಯಮದಲ್ಲಿ ಹೆಚ್ಚಿನ ಅಧ್ಯಯನ ಮಾಡಿದ್ದು ಪತ್ರಿಕೆಯೊಂದನ್ನು ಪ್ರಾರಂಭಿಸಬೇಕೆನ್ನುವ ಮಹದಾಸೆಯೊಂದಿಗೆ ಮುದ್ರಣಾಲಯವನ್ನೂ ಪ್ರಾರಂಭಿಸಿದರು. ವಕೀಲಿ ವೃತ್ತಿಯನ್ನೂ ಕೈಗೆತ್ತಿಕೊಂಡರು.

ಸಾಹಿತಿಯಾಗಿ ಗುರುತಿಸಿಕೊಳ್ಳದಿದ್ದರೂ ಅಸಂಖ್ಯಾತ ಸಾಹಿತಿಗಳ ಒಡನಾಟ ಅವರಿಗೆ ಸಿಕ್ಕಿದ್ದರಿಂದ ಅವರ ಬಾಳ ಪಥವೇ ಸಾಹಿತ್ಯದ ಹಾದಿ ಹಿಡಿಯುವಂತೆ ಮಾಡಿತು. ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ 2008ರಲ್ಲಿ ಚುನಾವಣೆಯ ಮೂಲಕ ಬಹುಮತದಿಂದ ಆಯ್ಕೆಯಾಗಿ 2011ವರೆಗೆ ದಾಖಲೆಯ ಕಾರ್ಯಕ್ರಮಗಳನ್ನು ಮಾಡಿದ ಹೆಗ್ಗಳಿಕೆಗೆ ಪಾತ್ರರಾದರು. 3 ವರ್ಷದ ಅವಧಿಯಲ್ಲಿ ನೂರಾರು ಕಾರ್ಯಕ್ರಮಗಳನ್ನು ಮಾಡುವುದರ ಮೂಲಕ ಮನೆಮಾತಾದರು. ಸಾಹಿತ್ಯವಲಯದಲ್ಲಿ ತನ್ನ ಹೆಸರನ್ನು ಸಾಹಿತ್ಯ ಪರಿಷತ್ತಿನಿಂದಲೇ ಮುದ್ರಿಸಿ ಪ್ರಕಟಿಸಿ ಲೇಖಕರ ಪ್ರತಿಭೆಯನ್ನು ಲೋಕಾರ್ಪಣೆಗೊಳಿಸಿದರು. 500ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಆಯೋಜಿಸಿ ಬೇರೆಯವರಿಗೆ ಮಾದರಿಯಾದರು. ಇದೇ ಕಾರಣಕ್ಕಾಗಿ ಮಡಿಕೇರಿಯಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಗೋಪಾಲ್ ಅವರು 30ಕ್ಕೂ ಹೆಚ್ಚು ಕೃತಿಗಳನ್ನು ಸಂಪಾದಿಸಿದ್ದಾರೆ. ಹಲವಾರು ಉದಯೋನ್ಮುಖರ ಕೃತಿಗಳನ್ನು ಮುದ್ರಿಸಿ ಪ್ರಕಟಿಸಿ ಅವರ ಸರ್ವತ್ತೋಮುಖ ಬೆಳವಣಿಗೆಗೆ ಕಾರಣಕರ್ತರಾಗಿದ್ದಾರೆ. ಮಡ್ಡಿಕೆರೆ ಗೋಪಾಲ್ ಅವರ ಕನ್ನಡ ಸೇವೆ ಹಾಗೂ ಸಂಘಟನಾ ಶಕ್ತಿಯಿಂದಾಗಿ 2021–2026ನೇ ಸಾಲಿನ ಕನ್ನಡ ಸಾಹಿತ್ಯ ಪರಿಷತ್ತಿನ ಮೈಸೂರು ಜಿಲ್ಲಾಧ್ಯಕ್ಷರಾಗಿ ಪುನರಾಯ್ಕೆಗೊಂಡು ಐತಿಹಾಸಿಕ ಗೆಲುವನ್ನು ತಮ್ಮದಾಗಿಸಿಕೊಂಡರು.

ವಿಜಯನಗರದ ಕನ್ನಡ ಸಾಹಿತ್ಯ ಭವನ, ಅರಮನೆ ಉತ್ತರ ದ್ವಾರದಲ್ಲಿರುವ ನಗರ ಘಟಕ ಕಛೇರಿ, ತಾತಯ್ಯನವರ ಉದ್ಯಾನವನ, ಕುವೆಂಪುವನ ಅಭಿವೃದ್ಧಿ, ಕುವೆಂಪು ಪುತ್ಥಳಿಗೆ ಮೇಲ್ಚಾವಣಿ ಅಲ್ಲದೆ ಹಲವಾರು ಮಹತ್ವದ ಕಾರ್ಯಗಳನ್ನು ರೂಪಿಸುವುದರಲ್ಲಿಯೂ ಇವರ ಶ್ರಮವಹಿಸಿದ್ದಾರೆ. ಜನಪರ ಚಳುವಳಿ, ಕನ್ನಡಪರ ಹೋರಾಟಗಳಲ್ಲಿ ಮುಂದಿದ್ದರು. ಗೋಕಾಕ್ ಚಳುವಳಿ, ಕಾವೇರಿ ಚಳುವಳಿ, ರೈಲ್ವೆಯಲ್ಲಿ ಕನ್ನಡ ಬಳಕೆ ಚಳುವಳಿಗಳು ಮಂತಾದವುಗಳಲ್ಲಿ ಭಾಗವಹಿಸಿದ್ದರು. ಯೂತ್ ಹಾಸ್ಟೆಲ್, ಉದಯಗಿರಿ ಕನ್ನಡ ಸಂಘ, ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ, ನರಸಿಂಹರಾಜ ನಾಗರಿಕ ವೇದಿಕೆ ಮುಂತಾದ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಕುಟುಂಬ ನಿಯಂತ್ರಣ ಶಸ್ತ್ರಚಿಕಿತ್ಸೆ, ಹದಿ ಹರೆಯದ ಹೆಣ್ಣು ಮಕ್ಕಳು ಮತ್ತು ವಿಕಲಚೇತನರಿಗೆ ನೂರಾರು ಕಾರ್ಯಕ್ರಮಗಳ ಆಯೋಜನೆ, ಬಡ ಹೆಣ್ಣು ಮಕ್ಕಳಿಗಾಗಿ ಉಚಿತ ಉದ್ಯೋಗ ತರಬೇತಿ, ಕಣ್ಣಿನ ತಪಾಸಣೆ, ಆರೋಗ್ಯ ತಪಾಸಣೆ ಅಲ್ಲದೆ ವಿದ್ಯಾಭ್ಯಾಸಕ್ಕಾಗಿ ಬಡ ಮಕ್ಕಳಿಗೆ ಸಹಾಯಹಸ್ತ ನೀಡಿಯೂ ಜನಾನುರಾಗಿಯಾದ್ದರು. ಅಂತರಜಾತಿ ವಿವಾಹಕ್ಕೂ ಪ್ರೋತ್ಸಾಹ ನೀಡುವುದರ ಮೂಲಕ ಸಮಾಜಮುಖಿಯಾಗಿಯೂ ಗುರುತಿಸಿಕೊಂಡಿದ್ದಾರೆ.

ಕ್ಯಾತಮಾರನಹಳ್ಳಿಯ ಹಿರಿಯ ಪ್ರಾಥಮಿಕ ಶಾಲೆಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಶಾಲೆಯ ಹಳೆಯ ಛಾವಣಿ ಕುಸಿದಾಗ ಅದನ್ನು ಸ್ಥಳೀಯರ ನೆರವಿನಿಂದಾಗಿ ಆರು ತಿಂಗಳಲ್ಲೇ ಎರಡಂತಸ್ತಿನ ಕಟ್ಟಡವನ್ನು ಮರು ನಿರ್ಮಾಣ ಮಾಡಿ 400 ಇದ್ದ ವಿದ್ಯಾರ್ಥಿಗಳ ಸಂಖ್ಯೆಯನ್ನು ಸಾವಿರಕ್ಕೆ ಏರಿಸಿದ ಕೀರ್ತಿಹಾರಿಸಿದರು.

ಮೈಸೂರು ಜಿಲ್ಲಾಡಳಿತದಿಂದ ಉತ್ತಮ ಆಡಳಿತಗಾರ ಹಾಗೂ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರು ಪ್ರಶಸ್ತಿ, ಕನ್ನಡ ಪರಿಚಾರಕ, ಸಂಘಟನಾ ಚತುರ, ವಿದ್ಯಾರಣ್ಯ ಪ್ರಶಸ್ತಿ, ಸೇವಾರತ್ನ ಪ್ರಸಸ್ತಿ, ಹೊಯ್ಸಳ ಶ್ರೀ ಪ್ರಸಸ್ತಿ, ವಿಶ್ವಮಾನವ ಸೇವಾ ಪ್ರಶಸ್ತಿ, ಕನ್ನಡ ಸ್ವಾಭಿಮಾನಿ ಪ್ರಸಸ್ತಿ, ಸಂಘಟನಾ ಸರದಾರ ಪ್ರಶಸ್ತಿ, ಸಾಹಿತ್ಯ ಬಂಧು ಪ್ರಶಸ್ತಿ, ಡಾ.ರಾಜ್ ಸದ್ಭಾವನಾ ಪ್ರಶಸ್ತಿ, ಸಾಹಿತ್ಯ ಸಿಂಚನ ಪ್ರಶಸ್ತಿಗಳಲ್ಲದೆ ಅಂತರರಾಷ್ಟ್ರೀಯ ಎಫ್‌ಪಿಎ ಇಂಡಿಯಾ ಸಂಸ್ಥೆಯಿಂದ ಉತ್ತಮ ಸ್ವಯಂ ಸೇವಕ ಪ್ರಶಸ್ತಿ, ರೋಟರಿ ಮೈಸೂರು ಸಂಸ್ಥೆಯಿಂದ ವರ್ಷದ ರಾಜ್ಯೋತ್ಸವ ಪ್ರಶಸ್ತಿ ಸೇರಿ ಅನೇಕ ಪ್ರಶಸ್ತಿ ಪಡೆದಿದ್ದರು. ಜುಲೈ 20ರಂದು ಕಲಾಮಂದಿರದಲ್ಲಿ ಅವರ ಅಭಿನಂದನಾ ಸಮಾರಂಭ ನಡೆದಿತ್ತು. ಅಭಿನಂದನಾ ಸಮಿತಿಯು 'ಮಡ್ಡಿಕೆರೆ ಮಾಣಿಕ್ಯ ನಮ್ಮ ಗೋಪಾಲ' ಅಭಿನಂದನಾ ಗ್ರಂಥ ಹೊರತಂದಿತ್ತು. ಹೃದಯವಂತ, ಸ್ನೇಹಶೀಲ ಕಾವ್ಯಾಭಿನಂದನೆ ಕೃತಿಗಳನ್ನೂ ಬಿಡುಗಡೆ ಮಾಡಲಾಗಿತ್ತು.

ಕಂಬನಿ ಮಿಡಿದವರು

ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ವಾಟಾಳು ಮಠದ ಸಿದ್ದಲಿಂಗ ಶಿವಚಾರ್ಯ ಸ್ವಾಮೀಜಿ ವಿಧಾನ ಪರಿಷತ್ ಸದಸ್ಯರಾದ ಡಾ.ತಿಮ್ಮಯ್ಯ, ಶಾಸಕ ಶ್ರೀವತ್ಸ, ಕೆ.ಹರೀಶ್ ಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಎಚ್.ವಿಶ್ವನಾಥ್, ಮಾಜಿ ಸಂಸದ ಪ್ರತಾಪಸಿಂಹ, ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್, ಮುಡಾ ಮಾಜಿ ಅಧ್ಯಕ್ಷರಾದ ಮರಿಗೌಡ, ಎಚ್.ವಿ.ರಾಜೀವ್, ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಶ್ರೀಕಂಠಯ್ಯ, ಬೈರಪ್ಪ, ಮಾಜಿ ಡಾ.ಪದ್ಮಾಶೇಖರ್, ವಿಶ್ರಾಂತ ಪ್ರಾಧ್ಯಾಪಕ ಸೋಮಶೇಖರ್, ಕೆ.ಟಿ.ವೀರಪ್ಪ, ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ.ಗಂಗಾಧರ್, ಮಾಜಿ ಕಸಾಪ ಅಧ್ಯಕ್ಷರಾದ ಡಾ.ವೈ.ಡಿ.ರಾಜಣ್ಣ, ಚಂದ್ರಶೇಖರ್, ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್, ಕರ್ನಾಟಕ ಕಾವಲುಪಡೆ ರಾಜ್ಯಾಧ್ಯಕ್ಷ ಮೋಹನ್ ಕುಮಾರ್ ಗೌಡ, ಕನ್ನಡ ಚಳವಳಿ ಹೋರಾಟಗಾರರಾದ ಮೂಗೂರು ನಂಜುಂಡಸ್ವಾಮಿ, ಅರವಿಂದ ಶರ್ಮ, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಬಾಲಕೃಷ್ಣ, ಪವನ ಸಿದ್ದರಾಮ, ಗಿರೀಶ್ ಗೌಡ, ಕೆ.ರಘುರಾಮ್ ವಾಜಪೇಯಿ, ಕರ್ನಾಟಕ ಸೇನಾಪಡೆ ಅಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಮಾಜಿ ಮೇಯರ್ ಪೋದಮಣಿ, ರಾಜಶೇಖರ ಕದಂಬ, ಪ್ರೊ.ಸಿ.ನಾಗಣ್ಣ, ಯಮುನಾ, ಜಾಕಿರ್ ಹುಸೇನ್, ಡೇರಿ ವೆಂಕಟೇಶ್, ವಕೀಲ ನಾಗರಾಜ್, ಜೋಗಿ ಮಂಜು, ಪ್ರಗತಿಪರ ಚಿಂತಕ ಡಾ.ಎಸ್. ತುಕಾರಾಂ, ದೇವನೂರು ಶಿವಮಲ್ಲು, ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಇನ್ನಿತರರು ಕಂಬನಿ ಮಿಡಿದರು.

ಯೋಗದಿ ಗೆಲ್ಲು ಮೃತ್ಯುವ

ಯೋಗವೆಂದರೆ ಕೇವಲ ದೇಹದ ಕಸರತ್ತಲ್ಲ, ಉಸಿರಿನೊಂದಿಗೆ ನಡೆಸುವ ಮೌನ ಸಂವಾದ. ಅನುಲೋಮ–ವಿಲೋಮ ಪ್ರಾಣಾಯಾಮ ವೇಗಸ್ ನರವನ್ನು ಮೃದುವಾಗಿ ತಟ್ಟಿ ಹೃದಯದ ಬಡಿತವನ್ನು ಸಮಸ್ಥಿತಿಗೆ ತರುತ್ತದೆ. ಈ ಸ್ಥಿರತೆ ರಕ್ತದೊತ್ತಡದ ಏರಿಳಿತವನ್ನು ತಡೆದು ಹೃದಯಾಘಾತ, ಪಾರ್ಶ್ವವಾಯುವಿನ ಅಪಾಯವನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ. ಯೋಗನಿದ್ರಾದ ಆಳವಾದ ನಿಶ್ಚಲತೆಯಲ್ಲಿ ಮಿದುಳು ಥೀಟಾ ತರಂಗಕ್ಕೆ ಇಳಿದಾಗ ಕೋಶಗಳ ದುರಸ್ತಿ ಜೀನ್‌ಗಳು ಎಚ್ಚರಗೊಂಡು ಉರಿಯೂತ ಶಮನವಾಗಿ ಆಯುಷ್ಯ ವೃದ್ಧಿಸುತ್ತದೆ, ಮನಸ್ಸು ನಿರಾಳವಾಗುತ್ತದೆ.

ಪ್ರತಿ ಮುಂಜಾನೆ ಮಾಡುವ ಸೂರ್ಯ ನಮಸ್ಕಾರ ಪಿಟ್ಯುಟರಿ ಗ್ರಂಥಿಯನ್ನು ಸಮನ್ವಯಗೊಳಿಸಿ ಹಾರ್ಮೋನುಗಳ ಏರುಪೇರನ್ನು ತಿಳಿಗೊಳಿಸಿ ನಿದ್ರೆ–ಎಚ್ಚರದ ಲಯವನ್ನು ಸರಿಪಡಿಸಿ ರೋಗನಿರೋಧಕತೆಯನ್ನು ಹೆಚ್ಚಿಸುತ್ತದೆ. ಸೂರ್ಯರಶ್ಮಿ ಬೀಳುವೆಡೆ ಹಾಸು ಹಾಕಿ ಐದು ನಿಮಿಷ ಭ್ರಾಮರಿ ಪ್ರಾಣಾಯಾಮ ಮಾಡುವುದು, ತಾಡಾಸನದಲ್ಲಿ ನಿಂತು ವೃಕ್ಷಾಸನದಲ್ಲಿ ಏಕಾಗ್ರತೆ ಸಾಧಿಸಿ ಭುಜಂಗಾಸನದಲ್ಲಿ ಬೆನ್ನು ಹಿಗ್ಗಿಸುವುದು ದಿನವನ್ನು ಪ್ರಸನ್ನಗೊಳಿಸಿ ದೇಹಕ್ಕೆ ಹೊಸ ಶಕ್ತಿ ತುಂಬುತ್ತದೆ.

ಯೋಗದ ಹಾಸು ಸಾಮರಸ್ಯದ ವೇದಿಕೆ ಕೂಡ ಹೌದು. ಊರ ಮೈದಾನದಲ್ಲಿ ಹಿರಿಯ–ಕಿರಿಯರು ವೃತ್ತಾಕಾರವಾಗಿ ಕುಳಿತು ಮಾಡುವ ಹಾಸ್ಯಯೋಗ, ಕಾರ್ಖಾನೆಯಲ್ಲಿ ದುಡಿಯುವವರಿಗೆ ಮಧ್ಯಾಹ್ನದ ಕುರ್ಚಿ–ಯೋಗದ ಸಣ್ಣ ಬಿಡುವು, ಗ್ರಾಮೀಣ ಆರೋಗ್ಯ ಕೇಂದ್ರದಲ್ಲಿ ಗರ್ಭಿಣಿಯರಿಗಾಗಿ ನಡೆಸುವ ಸೌಮ್ಯ ಯೋಗಾಭ್ಯಾಸ ಇವೆಲ್ಲ ಒಂಟಿತನದ ಗೋಡೆಯನ್ನು ಕೆಡವಿ ಸಮುದಾಯದ ಬೆಸುಗೆಯನ್ನು ಗಟ್ಟಿಗೊಳಿಸುತ್ತವೆ. ಉತ್ಸವದ ಬೆಳಿಗಿನ ಸಹಸ್ರ ಕಂಠಗಳ ಓಂಕಾರದ ಧ್ವನಿ ಊರಿನ ವಾತಾವರಣವನ್ನು ಶುದ್ಧಗೊಳಿಸಿ ಮನಸ್ಸಿನ ಕಲ್ಮಶವನ್ನು ತೊಳೆಯುತ್ತದೆ, ವೈಮನಸ್ಯ ಕರಗಿ ಸಹಬಾಳ್ಮೆ, ಸಹಾನುಭೂತಿ ಅರಳುತ್ತದೆ.

ದಿನಚರಿಯಲ್ಲಿ ಕೆಲಸದ ನಡುವೆ ಎರಡು ಗಂಟೆಗೊಮ್ಮೆ ಕುತ್ತಿಗೆ–ಸೊಂಟಕ್ಕೆ ಚಲನೆ ನೀಡಿ, ರಾತ್ರಿ ಮಲಗುವ ಮುನ್ನ ವಿಪರೀತ ಕರಣಿ ಭಂಗಿಯಲ್ಲಿ ಕಾಲುಗಳನ್ನು ಗೋಡೆಗೆ ಒರಗಿಸಿ ರಕ್ತಪ್ರವಾಹ ಸರಾಗಗೊಳಿಸಿ, ಹುಣ್ಣಿಮೆಯ ರಾತ್ರಿ ದೀಪದ ಜ್ವಾಲೆಗೆ ತ್ರಾಟಕ ಮಾಡಿ ದೃಷ್ಟಿ ಕೇಂದ್ರೀಕರಿಸಿ. ಹೀಗೆ ಉಸಿರು, ಭಂಗಿ, ಧ್ಯಾನದ ತ್ರಿಸೂತ್ರವನ್ನು ಬದುಕಿಗೆ ಅಳವಡಿಸಿದರೆ ಮೃತ್ಯುವಿನ ಭೀತಿ ಮೆಲ್ಲನೆ ಮರೆಯಾಗಿ ಯೋಗವೇ ಆಯುಷ್ಯವನ್ನು ಬೆಳಗುವ ನಿತ್ಯ ದೀಪವಾಗುತ್ತದೆ, ಬದುಕು ನಿಜಕ್ಕೂ ಯೋಗಮಯವಾಗಿ ಬೆಳಗುತ್ತದೆ.

ಅಂಕಣ-12

ಸಾವು ಸಂಕಟಪಡುವ ಸಂಗತಿಗಳು..!

ಡಾ.ಸುಧಾಕರ.ಜಿ.ಲಕ್ಕವಳ್ಳಿ

ಲೋಕೋದ್ಧಾರಕ್ಕಾಗಿ ಜನಸಿದ "ಶ್ರೀಕೃಷ್ಣ" ಶ್ರವಣ ಕೃಷ್ಣ ಅಷ್ಟಮಿಯ ಜನ್ಮಾಷ್ಟಮಿಯ ಪರ್ವ



ಮಾಧುರಿ ದೇಶಪಾಂಡೆ, ಬೆಂಗಳೂರು

ಶ್ರೀ ಮನ್ನಾರಾಯಣನು ಭಕ್ತರ ಉದ್ಧಾರಕ್ಕಾಗಿ ದಶಾವತಾರಗಳನ್ನು ತಳೆದಿದ್ದಾನೆ. ಮತ್ಸ್ಯ, ಕೂರ್ಮ, ವರಾಹ, ವಾಮನ, ನಾರಸಿಂಹ, ಪರಶುರಾಮ, ರಾಮ, ಕೃಷ್ಣ ಬೌದ್ಧ ಮತ್ತು ಕಲ್ಕಿ. ದ್ವಾಪರಯುಗವು ಕಲಿಯುಗಕ್ಕೆ ಮೊದಲಿಗೆ ಬರುವ ಯುಗವಾಗಿದ್ದು ಕೃಷ್ಣಾವತಾರವು ನಮ್ಮ ಕಾಲಕ್ಕೆ ಸಮೀಪದ ಕಾಲವಾಗಿದೆ. ದಶಾವತಾರಗಳಲ್ಲಿ ಕೃಷ್ಣಾವತಾರ ಎಂಟನೇ ಅವತಾರವಾಗಿದ್ದು ಶ್ರೀಕೃಷ್ಣ ಪರಮಾತ್ಮನು ತನ್ನ ಪ್ರತಿಯೊಂದು ಅವತಾರದಂತೆ ದುಷ್ಟ ಶಿಕ್ಷಣ ಶಿಷ್ಟ ರಕ್ಷಣಕ್ಕಾಗಿ ಜನ್ಮ ತಳೆಯುತ್ತಾನೆ. ಜರಾಸಂಧ, ಕಂಸ, ಕಾಲನೇಮಿ ಮೊದಲಾದ ರಾಕ್ಷಸರ ಹಾವಳಿ ಸಜ್ಜನರ, ಋಷಿ ಮುನಿಗಳ ಮೇಲೆ ನಡೆಯುತ್ತಿದ್ದ ಅತ್ಯಾಚಾರ ಅನ್ಯಾಯಗಳನ್ನು ನಾಶ ಮಾಡಲು ಶ್ರೀಕೃಷ್ಣ ಪರಮಾತ್ಮನ ಜನ್ಮವಾಗಿದೆ. ಎಂದಿಗೆಲ್ಲ ಅನ್ಯಾಯ ಅತ್ಯಾಚಾರಗಳ ಕಾಟ ಹೆಚ್ಚಾಗುತ್ತೆದೆಯೋ ಆಗ ನಾನು ಶಿಷ್ಟ ರಕ್ಷಣೆಗೆ ಜನಿಸುತ್ತೇನೆ ಎಂದು ಭಗವದ್ಗೀತೆಯಲ್ಲಿ "ಪರಿತ್ರಾಣಾಯ ಶಾದುನಾಂ ವಿನಾಶಯಚ ದೃಶ್ಕೃತಾಂ ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ" ಎಂದು ಶ್ರೀಕೃಷ್ಣನೇ ಹೇಳಿದ್ದಾನೆ.

ಶ್ರೀಕೃಷ್ಣನ ಹುಟ್ಟಿನ ಹಿನ್ನೆಲೆ : ದ್ವಾಪರಯುಗದಲ್ಲಿ ಮಥುರಾ ಪಟ್ಟಣದಲ್ಲಿ ಉಗ್ರಸೇನ ಮಹಾರಾಜರ ಆಳ್ವಿಕೆ ಇತ್ತು ಉಗ್ರಸೇನನ ತಮ್ಮ ದೇವಕನ ಮಗಳು ದೇವಕಿ ಉಗ್ರಸೇನ ಮಹಾರಾಜನ ದೊಡ್ಡ ಮಗ ಕಂಸನಿಗೆ ಪರಮ ಪ್ರಿಯಳಾಗಿದ್ದಳು. ಯದುಕುಲದಲ್ಲಿ ಜನಿಸಿದ ಕಂಸನಿಗೆ ವಸುದೇವ ವೃಷ್ಣಿ ವಂಶದ ರಾಜಕುಮಾರ ಹಾಗೂ ಕಂಸನ ಮಿತ್ರನಾಗಿದ್ದನು. ಕಂಸನು ಬಹಳ ಪ್ರೀತಿಯಿಂದ ಸಹೋದರಿ ದೇವಕಿ ಮತ್ತು ಗೆಳೆಯ ವಸುದೇವನ ಮದುವೆಯನ್ನು ಮಾಡಿ ಮೆರವಣಿಗೆ ಹೊರಟಾಗ ಆಕಾಶವಾಣಿಯು "ದೇವಕಿಯ ಎಂಟನೇ ಗರ್ಭದಿಂದ ನಿನಗೆ ಮೃತ್ಯು" ಎಂದು ಕಂಸನನ್ನು ಉದ್ದೇಶಿಸಿ ಎಚ್ಚರಿಕೆ ನೀಡಿತು. ಅವರಿಬ್ಬರ ವಧೆಯನ್ನು ಮಾಡ ಹೊರಟ ಕಂಸನಿಗೆ ಇವರನ್ನು ಏಕೆ ಕೊಲ್ಲಬೇಕು ಸೆರೆವಾಸದಲ್ಲಿಟ್ಟು ಎಂಟು ಮಕ್ಕಳನ್ನು ಕೊಂದರಾಯಿತು ಎಂಬ ಬುದ್ಧಿ ಬಂದು ಅದೇ ಮದುವೆಯಾದ ಜೋಡಿಯನ್ನು ಸೆರೆವಾಸದಲ್ಲಿ ಬಂಧಿಸಿ ಇಟ್ಟನು. ಇವರ ಕ್ರೂರತನಕ್ಕೆ ವಿರೋಧ ಮಾಡಿದ ತಂದೆಯನ್ನು ಕೂಡ ಕಾರಾಗೃಹದಲ್ಲಿ ಬಂಧಿಸಿದನು.

ಶ್ರೀ ಕೃಷ್ಣನ ಜನನ : ಮರಣದ ಭಯ ಕಂಸನ ದುಷ್ಟತನವನ್ನು ಹೆಚ್ಚಿಸಿ ದಿನೇ ದಿನೇ ಕಂಸನ ಅತ್ಯಾಚಾರ ಅನ್ಯಾಯಗಳು ಹೆಚ್ಚಿತ್ತು. ದೇವಕಿಯ 6 ಜನ ಮಕ್ಕಳನ್ನು ಹುಟ್ಟಿದ ಕೂಡಲೇ ಕಾರಗಾರದಲ್ಲಿ ಕೊಲ್ಲುತ್ತಿದ್ದನು. ಏಳನೇ ಗರ್ಭದಲ್ಲಿ ಬಲರಾಮನ ಅಂಶ ಬಂದಾಗ ಆ ಗರ್ಭವನ್ನು ತೆಗೆದು ರೋಹಿಣಿಯ ಗರ್ಭದಲ್ಲಿ ಕರ್ಷಣೆಯ ಮೂಲಕ ಸ್ಥಾಪಿಸಿದ್ದರಿಂದ ಬಲರಾಮನಿಗೆ ಸಂಕರ್ಷಣ ಎಂಬ ಹೆಸರು ಕೂಡ ಇದೆ. ಎಂಟನೇ ಗರ್ಭದಲ್ಲಿ ಶ್ರೀಕೃಷ್ಣನು

ಅವತರಿಸಿದಾಗ ಈ ಬಾರಿ ಹೇಗಾದರೂ ಮಗನನ್ನು ಉಳಿಸಿಕೊಳ್ಳಬೇಕೆಂಬ ವಿಚಾರ ವಸುದೇವನ ಮನದಲ್ಲಿ ಬರುತ್ತದೆ. ಶ್ರೀಕೃಷ್ಣನ ಅವತಾರವಾದಾಗ ತಂದೆ ತಾಯಿಯರ ಬಂಧನಗಳು ಕಳಚಿ ಘೋರಾಂಧಕಾರದ ಮಳೆಯ ರಾತ್ರಿಯಲ್ಲಿ ಯಮುನಾ ನದಿಯನ್ನು ದಾಟಿ ಗೋಕುಲದ ನಂದಗೋಪನ ಮನೆಗೆ ಮಗುವನ್ನು ಕರೆದುಕೊಂಡು ಹೋಗಿ ಅವನ ಮನೆಯಲ್ಲ

ಸಿನಿಮಾ ವರದಿ: ಬಿ.ಜಿ.ರವಿಕುಮಾರ್

ಲೇಖಕಿ ಆಕಾಶವಾಣಿ ನಿರೂಪಕಿ ನಾಗಶ್ರೀ ಅವರ ಕಡೆ ಹಾಯ್ವ ದೋಣಿ ಕೃತಿ ಬಿಡುಗಡೆ ಮಾಡಿದ ಕಲಾವಿದೆ ಮೇಘನಾ ಗಾವ್ಕರ್...

ಬೆಂಗಳೂರು ಆಕಾಶವಾಣಿಯ ಕನ್ನಡ ಎಫ್ ಎಂ ರೇನ್ಬೋ 101.3 ವಾರ್ಷಿಕೋತ್ಸವ ಸಂಭ್ರಮದಲ್ಲಿ ಅಧಿಕಾರಿಗಳು ಹಾಗೂ ನಿರೂಪಕರು

ನಟಿ ತಾರಾ ಮನೆಯಲ್ಲಿ ವರಮಹಾಲಕ್ಷ್ಮಿ ಹಬ್ಬದ ಸಂಭ್ರಮ.. ಸುಧಾರಾಣಿ ಅಂಜಲಿ ವಾಣಿಶ್ರೀ ತ್ರಿವೇಣಿ ಗೀತಾ ಚಂದ್ರಶೇಖರ್ ಪೂಜೆಯಲ್ಲಿ ಪಾಲ್ಗೊಂಡರು ನಟಿತಾರಾ ಹಾಗೂ ಪತಿ ವೇಣು

ದಸರಾ ದಲ್ಲಿ ಬೃಂದಾವಿಹಾರಿ ತೆರೆಗೆ

ನಟ ಗಣೇಶ್ ಮತ್ತು ನಿರ್ದೇಶಕ ಶ್ರೀನಿವಾಸ ರಾಜು ಜೋಡಿ ಕೃಷ್ಣಂ ಪ್ರಣಯ ಸಖಿ ಚಿತ್ರದ ಭರ್ಜರಿ ಯಶಸ್ಸಿನ ನಂತರ ಮತ್ತೊಮ್ಮೆ ಬೃಂದಾವಿಹಾರಿ ಚಿತ್ರದಲ್ಲಿ ಜೊತೆಯಾಗಿದ್ದಾರೆ. ಶಾಸಕ ಹಾಗೂ ನಿರ್ಮಾಪಕ ಸಮೃದ್ಧಿ ವಿ ಮಂಜುನಾಥ್ ನಿರ್ಮಾಣ ಮಾಡಿದ್ದಾರೆ. ದಸರಾ ಸಂದರ್ಭದಲ್ಲಿ ಈ ಚಿತ್ರ ಬಿಡುಗಡೆಯಾಗಲಿದೆ. ಪ್ರಚಾರಕ್ಕೆ ಚಾಲನೆ ನೀಡಲು ಪ್ರಚಾರ ಸಂಭ್ರಮ ಕಾರ್ಯಕ್ರಮ ಆಯೋಜಿಸಲಾಗಿತ್ತು. ಚಿತ್ರದ ಮೂರು ಹಾಡುಗಳನ್ನು ಈ ಸಂದರ್ಭದಲ್ಲಿ ಪ್ರದರ್ಶಿಸಲಾಯಿತು.

ಹಿರಿಯ ನಟಿ ಲಕ್ಷ್ಮಿ ಅವರ ಜೊತೆ ಕೆಲಸ ಮಾಡಿರುವುದು ನನಗೆ ಬಹಳ ಖುಷಿಯಾಗಿದೆ. ಚಿತ್ರೀಕರಣ ಸಮಯದಲ್ಲಿ ಅವರಿಂದ ಸಾಕಷ್ಟು ಕಲಿತಿದ್ದೇನೆ. ಹಿರಿಯ ಕಲಾವಿದರಾದ ಅಶೋಕ್, ರಾಮ್ ಕುಮಾರ್, ರಂಗಾಯಣ ರಘು ಮುಂತಾದವರ ಜೊತೆಗೆ ಅಭಿನಯಿಸಿರುವುದು ವಿಶೇಷ ಅನುಭವ ನೀಡಿದೆ. ಚಿತ್ರದಲ್ಲಿ ನನ್ನ ಪಾತ್ರದ ಹೆಸರು ಮಾಧವ. ಪ್ರೇಕ್ಷಕರು ನನ್ನಿಂದ ಏನು ಬಯಸುತ್ತಾರೆ ಅದು ಈ ಚಿತ್ರದಲ್ಲಿದೆ. ಮುಗ್ಧತೆ, ಭಾವನೆಗೆ ಬೆಲೆ ಕೊಡುವ ಪಾತ್ರ. ಮೊದಲ ಹಂತದ ಚಿತ್ರೀಕರಣ ಮುಕ್ತಾಯವಾಯಿತು. ನಿರ್ದೇಶಕರು ಏನೋ ವಿಶೇಷ ಇದೆ ಅಂತ ಹೇಳುತ್ತಿದ್ದಾರೆ. ಅದು ಏನಿರಬಹುದು ಅಂತ ಯೋಚಿಸುತ್ತಿದ್ದಾಗ, ಎರಡನೇ ಹಂತದ ಚಿತ್ರೀಕರಣ ಸಮಯದಲ್ಲಿ ಅವರು ಸ್ಕ್ರಿಪ್ಟ್ ನೀಡಿದರು. ಅದು ನೋಡಿದ ಮೇಲೆ ರೈಟರ್ಸ್ ಜೊತೆಗೆ ಕುಳಿತು ಚರ್ಚೆ ಮಾಡಿದೆ. ಎಮೋಷನ್, ಹಾಸ್ಯ ಮತ್ತು ಸಂಬಂಧಗಳನ್ನು ಹೇಗೆ ಒಟ್ಟಿಗೆ ಕಟ್ಟಿಕೊಡುವುದು ಎನ್ನುವುದು ಸವಾಲಿನಿಂದ ಕೂಡಿತ್ತು. ನಿರ್ದೇಶಕರು ಎಲ್ಲರಿಂದಲೂ ಒಳ್ಳೆಯ ಕೆಲಸ ತೆಗೆಸಿದ್ದಾರೆ. ಚಿತ್ರ ಅತ್ಯುತ್ತಮ ವಾಗಿ ಮೂಡಿಬಂದಿದೆ. ನಟ ಗಣೇಶ್..

ಅಕ್ಟೋ.16ಕ್ಕೆ ಚಿತ್ರ ಬಿಡುಗಡೆಯಾಗುತ್ತಿದೆ. ಮೇಲುಕೋಟೆಯಲ್ಲಿ ಪೂಜೆ ಮಾಡಿ ಚಿತ್ರೀಕರಣ ಆರಂಭ ಮಾಡಿದ್ದೆವು. ಯಾವುದೇ ಅಡೆತಡೆಗಳಿಲ್ಲದೆ ಮೊದಲ ಹಂತದ ಚಿತ್ರೀಕರಣ 56 ದಿನಗಳ ಕಾಲ ಸತತವಾಗಿ ಮೈಸೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚಿತ್ರೀಕರಣ ನಡೆದಿದೆ. ಒಂದು ಸಾವಿರಕ್ಕೂ ಅಧಿಕ ಜನರು ಚಿತ್ರೀಕರಣದಲ್ಲಿ ಭಾಗಿಯಾಗುತ್ತಿದ್ದರು ಎಂದು ನಿರ್ಮಾಪಕ ಸಮೃದ್ಧಿ ವಿ ಮಂಜುನಾಥ್ ತಿಳಿಸಿದರು.

ನಿರ್ದೇಶಕ ಶ್ರೀನಿವಾಸ ರಾಜು ಮಾತನಾಡಿ ಈ ಸಿನಿಮಾ ಆದಮೇಲೆ ಮುಂದೆ ಗಣೇಶ್ ಅವರ ಜೊತೆಗೆ ಯಾವುದೇ ಸಿನಿಮಾ ಮಾಡದಿದ್ದರೂ ಪರವಾಗಿಲ್ಲ. ಈ ಸಿನಿಮಾ ನನಗೆ ಅಷ್ಟು ತೃಪ್ತಿ ನೀಡಿದೆ. ಈ ಸಿನಿಮಾಗೆ ನಿಜವಾದ ನಾಯಕ ಎಂದರೆ ಗಣೇಶ್ ಮಾತ್ರ. ಅಷ್ಟು ಅದ್ಭುತವಾಗಿ ನಟಿಸಿದ್ದಾರೆ. ಇನ್ನೂ, ಈ ಚಿತ್ರಕ್ಕೆ ಕೇಳಿದೆಲ್ಲಾ ಕೊಟ್ಟು ಯಾವುದೇ ಕೊರತೆ ಬಾರದ ಹಾಗೆ ಮಾಡಿರುವ ನಿರ್ಮಾಪಕರಿಗೆ, ಚಿತ್ರ ಉತ್ತಮವಾಗಿ ಮೂಡಿಬರಲು ಸಹಕಾರ ನೀಡಿದ ತಂತ್ರಜ್ಞರು ಹಾಗೂ ಕಲಾವಿದರಿಗೆ ಧನ್ಯವಾದ ಹೇಳುತ್ತೇನೆ. ಸರಿಯಾಗಿ ನಮ್ಮ ಚಿತ್ರ ಆರಂಭವಾಗಿ ಒಂದು ವರ್ಷಗಳಾಗಿದೆ. ಮುಂದಿನ ದಿನಗಳಲ್ಲಿ ಹಾಡುಗಳು ಹಾಗೂ ಟ್ರೇಲರ್ ಬಿಡುಗಡೆಯಾಗಲಿದೆ ಎಂದರು.

ನಟಿ ಮಾಳವಿಕ ಶರ್ಮಾ ಮಾತನಾಡಿಇದು ಕನ್ನಡದಲ್ಲಿ ಮೊದಲ ಸಿನಿಮಾಅಂದರು.

ನಾಯಕಿ ದೇವಿಕಾ ಭಟ್ ಮಾತನಾಡಿ, ಇದು ನನ್ನ ಮೊದಲ ಚಿತ್ರ. ಇಡೀ ಚಿತ್ರತಂಡ ನನಗೆ ಬೆಂಬಲ ನೀಡಿತು. ಹೀಗಾಗಿ ಚಿತ್ರದಲ್ಲಿ ನಾನು ಸರಾಗವಾಗಿ ಅಭಿನಯಿಸಿದೆ ಅಂದರು.

"MR ಜಾಕ್" ಟೀಸರ್ ಬಿಡುಗಡೆ

ಗುರುನಂದನ್ ನಾಯಕರಾಗಿ ನಟಿಸಿರುವ "MR. ಜಾಕ್" ಚಿತ್ರದ ಟೀಸರ್ ಆನಂದ್ ಆಡಿಯೋ ಯೂಟ್ಯೂಬ್ ಚಾನಲ್ ನಲ್ಲಿ ಬಿಡುಗಡೆಯಾಗಿದೆ. ಸುಮಂತ್ ಗೌಡ ನಿರ್ದೇಶನದ ಈ ಚಿತ್ರವನ್ನು ಮಂಡಿಮನೆ ಟಾಕೀಸ್ ಲಾಂಛನದಲ್ಲಿ ಗುರುನಂದನ್ ಅವರು ತಮ್ಮ ಸ್ನೇಹಿತರೊಡಗೂಡಿ ನಿರ್ಮಿಸಿದ್ದಾರೆ.

"MR ಜಾಕ್" ನಮ್ಮ ಸುತ್ತಮುತ್ತಲಿನಲ್ಲೇ ನಡೆಯುವ ಕಥೆ. ಈ ಚಿತ್ರದಲ್ಲಿ ಹಾಸ್ಯವೇ ಪ್ರಧಾನ. ಎಮೋಷನ್ ಸಹ ಇದೆ. ಅಷ್ಟೇ ಅಲ್ಲ ಈಗಿನ ಜನರು ಬಯಸುವ ಎಲ್ಲಾ ಅಂಶಗಳು ನಮ್ಮ ಚಿತ್ರದಲ್ಲಿದೆ. ಗುರುನಂದನ್ ನಾಯಕರಾಗಿ ನಟಿಸಿರುವ ಈ ಚಿತ್ರದ ನಾಯಕಿ ತಪಸ್ವಿನಿ ಪೂಣಚ್ಚ, ಮಿತ್ರ, ಗೋಪಾಲಕೃಷ್ಣ ದೇಶಪಾಂಡೆ, ಅರವಿಂದ್, ಧರ್ಮಣ್ಣ, ಸುಶ್ಮಿತ ಜಗ್ಗಪ್ಪ ಮುಂತಾದವರು ತಾರಾಬಳಗದಲ್ಲಿದ್ದಾರೆ. ಶಿವಸೇನ ಛಾಯಾಗ್ರಾಹಕರಾಗಿ, ಕಿರಣ್ ರವೀಂದ್ರನಾಥ್ ಸಂಗೀತ ನಿರ್ದೇಶಕರಾಗಿ ಹಾಗೂ ವಿಜಯ್ ರಾಜ್ ಸಂಕಲನಕಾರರಾಗಿ ಕಾರ್ಯ ನಿರ್ವಹಿಸಿದ್ದಾರೆ. ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ವರ್ಕ್ ಪೂರ್ಣವಾಗಿದೆ ಅಂದರು.

ಮಂಡಿಮನೆ ಟಾಕೀಸ್ ಎಂಬ ಸಂಸ್ಥೆಯ ಮೂಲಕ ನಿರ್ಮಾಣಕ್ಕೆನಾನೇ ಮುಂದಾದೆ.

ಕೆಲವು ಸ್ನೇಹಿತರು ನಿರ್ಮಾಣಕ್ಕೆ ಸಾಥ್ ನೀಡಿದ್ದಾರೆ. "MR ಜಾಕ್" ಅಲಿಯಾಸ್ ಜಾನಕಿರಾಮ ಈ ಚಿತ್ರದಲ್ಲಿ ನನ್ನ ಪಾತ್ರದ ಹೆಸರು. ಇದೊಂದು ಪರಿಶುದ್ಧ ಹಾಸ್ಯಮಯ ಮನೋರಂಜನೆಯ ಚಿತ್ರ. ಮದುವೆ ಆದ ನಂತರ ಕೆಲವರ ಜೀವನ ಸುಖವಾಗಿರುತ್ತದೆ. ಕೆಲವರ ಜೀವನ ಸುಖಕರವಾಗಿರದೆ ವಿಚ್ಛೇದನದ ತನಕ ಹೋಗುತ್ತದೆ ಎಂದರು ನಾಯಕ ಹಾಗೂ ನಿರ್ಮಾಪಕ ಗುರುನಂದನ್.

ಈ ಚಿತ್ರದಲ್ಲಿ ನನ್ನ ಪಾತ್ರದ ಹಸರು ನಂದಿನಿ. ಮುಗ್ಧ ಶಿಕ್ಷಕಿಯಾಗಿ ಕಾಣಿಸಿಕೊಂಡಿದ್ದೇನೆ ಎಂದು ನಾಯಕಿ ತಪಸ್ವಿನಿ ಪೂಣಚ್ಚ ಹೇಳಿದರು.

ಚಿತ್ರದಲ್ಲಿ ನಟಿಸಿರುವ ಮಿತ್ರ, ಅರವಿಂದ್, ಧರ್ಮಣ್ಣ, ಸುಶ್ಮಿತ ಜಗ್ಗಪ್ಪ, ಅನಂತ ಪದ್ಮನಾಭ, ಛಾಯಾಗ್ರಾಹಕ ಶಿವಸೇನ, ಸಂಗೀತ ನಿರ್ದೇಶಕ ಕಿರಣ್ ರವೀಂದ್ರನಾಥ್, ಸಂಕಲನಕಾರ ವಿಜಯ್ ರಾಜ್ ಹಾಗೂ ನೃತ್ಯ ನಿರ್ದೇಶಕ ಅಭಿಷೇಕ್ ಮುಂತಾದವರು ಚಿತ್ರದ ಕುರಿತು ಮಾತನಾಡಿದರು. ಸಹ ನಿರ್ಮಾಪಕರಾದ ಸಂತೋಷ್, ಮಹೇಶ್ ಹಾಗೂ ಸುಜಿತ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.

"ಒರಿಜಿನಲ್ ಮಾನ್ ಸ್ಟರ್"ಚಂದ್ರು ನಿರ್ಮಾಣ.. ಶಿವಣ್ಣ ನಟನೆ

ನಿರ್ದೇಶಕ ಆರ್ ಚಂದ್ರು ಈಗ ಬಾಲಿವುಡ್ ಗೆ ನಿರ್ಮಾಪಕರಾಗಿ ಅಡಿಯಿಟ್ಟಿದ್ದಾರೆ. ಬಾಲಿವುಡ್ ನ ಆನಂದ್ ಪಂಡಿತ್ ಅವರೊಡಗೂಡಿ ಹಿಂದಿ ಚಿತ್ರವನ್ನು ನಿರ್ಮಿಸಲು ಮುಂದಾಗಿದ್ದಾರೆ. ಹಿಂದಿ ಮಾತ್ರವಲ್ಲದೆ ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ಈ ಚಿತ್ರ ನಿರ್ಮಾಣವಾಗುತ್ತಿದೆ. ಕನ್ನಡದಲ್ಲಿ ಶಿವರಾಜಕುಮಾರ್ ಮತ್ತು ತೆಲುಗಿನಲ್ಲಿ ಸುನೀಲ್ ಅವರು ನಾಯಕರಾಗಿ ನಟಿಸುತ್ತಿದ್ದು, ಹಿಂದಿ, ತಮಿಳು ಹಾಗೂ ಮಲಯಾಳಂ ನಲ್ಲೂ ಸುಪ್ರಸಿದ್ಧ ಸ್ಟಾರ್ ನಟರು ನಾಯಕರಾಗಿ ನಟಿಸುತ್ತಿದ್ದಾರೆ. ವರ್ಷಗಳ ಹಿಂದೆ ಆರ್ ಚಂದ್ರು ಕೋಟಿ ವೆಚ್ಚದಲ್ಲಿ ಆನಂದ್ ಪಂಡಿತ್ ಅವರೊಂದಿಗೆ " ಕಬ್ಜ" ಚಿತ್ರವನ್ನು ನಿರ್ಮಾಣ ಮಾಡಿದ್ದರು. ಚಿತ್ರ ಚಂದ್ರು ಅವರಿಗೆ ಹೆಸರು ಹಾಗೂ ಹಣ ತಂದುಕೊಟ್ಟಿತು. ಈಗ ನೂತನ ಚಿತ್ರದ ಆರಂಭೋತ್ಸವನ್ನು ಮುಂಬೈನಲ್ಲಿ ಮಾಡಿದ್ದಾರೆ. ಈ ನೂತನ ಚಿತ್ರಕ್ಕೆ "ಒರಿಜಿನಲ್ ಮಾನ್ ಸ್ಟರ್" ಎಂಬ ಯುನಿವರ್ಸಲ್ ಟೈಟಿಲ್ ಇಡಲಾಗಿದೆ.

ಸದ್ಯ ಆರ್ ಚಂದ್ರು ನಿರ್ಮಾಣದ, "ಫಾದರ್" ಚಿತ್ರ ಬಿಡುಗಡೆ ಹಂತದಲ್ಲಿದೆ

"ಜಾಕಿ 42" ಚಿತ್ರಕ್ಕೆ ಸೆನ್ಸಾರ್

ಗುರುತೇಜ್ ಶೆಟ್ಟಿ ನಿರ್ದೇಶನದ, ಕಿರಣ್ ರಾಜ್ ನಾಯಕನಾಗಿ ನಟಿಸಿರುವ ಹಾಗೂ ಗೋಲ್ಡನ್ ಗೇಟ್ ಬ್ಯಾನರ್ ಅಡಿಯಲ್ಲಿ ಭಾರತಿ ಸತ್ಯನಾರಾಯಣ್ ನಿರ್ಮಾಣದ "ಜಾಕಿ 42" ಚಿತ್ರಕ್ಕೆ ಪ್ರಾದೇಶಿಕ ಸೆನ್ಸಾರ್ ಮಂಡಳಿ U/A ಪ್ರಮಾಣ ಪತ್ರ ನೀಡಿದೆ.

ಇದು ಕುದುರೆ ರೇಸ್ ಹಿನ್ನೆಲೆಯಲ್ಲಿ ನಡೆಯುವ ಕಥೆಯಾಗಿದ್ದು ಫ್ಯಾಮಿಲಿ ಎಮೋಷನ್ ಕೂಡ ಚಿತ್ರದಲ್ಲಿ ಗಮನ ಸೆಳೆದಿದೆ. ಪೂರ್ಣಪ್ರಮಾಣದಲ್ಲಿ ಹಾರ್ಸ್ ರೇಸ್ ಹಿನ್ನೆಲೆಯಲ್ಲಿ ಬರುತ್ತಿರುವ ಮೊದಲ ಭಾರತೀಯ ಚಿತ್ರವಿದು ಎನ್ನಲಾಗುತ್ತಿದೆ. ಇತ್ತೀಚಿಗೆ ಟಾಕ್ಸಿಕ್ ಚಿತ್ರದೊಂದಿಗೆ ಥಿಯೇಟ್ರಿಕಲ್ ಟ್ರೈಲರ್ ಬಿಡುಗಡೆ ಮಾಡಿ ಪ್ರೇಕ್ಷಕನ ಗಮನ ಸೆಳೆದಿದೆ. ಸದ್ಯದಲ್ಲೇ ಚಿತ್ರದ ಬಿಡುಗಡೆಯ ದಿನಾಂಕ ಘೋಷಣೆಯಾಗಲಿದೆ. ಕಿರಣ್ ರಾಜ್ , ಹೃತಿಕ ಶ್ರೀನಿವಾಸ್ ,ಯುಕ್ತ ಶೆಟ್ಟಿ, ರಾಜೇಂದ್ರ ಕಾರಂತ್,ಬಾಲರಾಜ್ ವಾಡಿ, ಗಿರೀಶ್ ಹೆಗ್ಡೆ ,ದೀಪಕ್ ರೈ ಅರುಣ್ ಆಚಾರ್,ಶಾಂತಲ ಕಾಮತ್ ಮುಂತಾದ ಕಲಾವಿದರು ತಾರಾಬಳಗದಲ್ಲಿದ್ದಾರೆ. ರಾಘವೇಂದ್ರ ಬಿ ಕೋಲಾರ ಛಾಯಾಗ್ರಹಣ, ಉಮೇಶ್ ಆರ್ ಬಿ ಸಂಕಲನ , ವಿನೋದ್ ಯಜಮಾನ್ಯ ಸಂಗೀತ ನಿರ್ದೇಶನ ಹಾಗೂ ಭೂಷಣ್ ಅವರ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ..

"NH66" ಚಿತ್ರದಲ್ಲಿ ರಾಜೇಶ್ ನಟರಂಗ

ರಾಯ ಫಿಲಂಸ್ ಲಾಂಛನದಲ್ಲಿ ಮಂಜುನಾಥ್ ಟಿ.ಆರ್ ನಿರ್ಮಿಸಿ, ನಿರ್ದೇಶಿಸಿರುವ "ಓಲೂ 66" ಚಿತ್ರದಲ್ಲಿ ನಟ ರಾಜೇಶ್ ನಟರಂಗ ನಟಿಸಿದ್ದಾರೆ. ಪ್ರಮೋದ್ ಶೆಟ್ಟಿ, ಶೃತಿ ಹರಿಹರನ್ ಚಿತ್ರದ ಪ್ರಮುಖಪಾತ್ರದಲ್ಲಿ ನಟಿಸಿದ್ದಾರೆ.

ಇತ್ತೀಚೆಗೆ ರಾಜೇಶ್ ನಟರಂಗ ಅವರ ಫಸ್ಟ್ ಲುಕ್ ಅನಾವರಣವಾಗಿದೆ. ಡಿಫರೆಂಟ್ ಲುಕ್ ನಲ್ಲಿ ಕಾಣಿಸಿಕೊಂಡಿದ್ದು ಪಾತ್ರ ಕುತೂಹಲ ಹುಟ್ಟಿಸಿದೆ. ಮಂಗಳೂರಿನಿಂದ ಗೋವಾ ಮೂಲಕ ಮುಂಬೈಗೆ ಹೋಗುವ ಮಾರ್ಗದಲ್ಲಿ ನಡೆಯುವ ಕಥೆ ಇದು. ಪ್ರಮೋದ್ ಶೆಟ್ಟಿ ಈ ಚಿತ್ರದಲ್ಲಿ ಕ್ಯಾಬ್ ಡ್ರೈವರ್ ಆಗಿ ಕಾಣಿಸಿಕೊಂಡರೆ, ಶೃತಿ ಹರಿಹರನ್ ರದು ಪಯಣಿಗರ ಪಾತ್ರ. ರಾಜೇಶ್ ನಟರಂಗ ಅವರ ಪಾತ್ರ ಏನು ಎಂಬುದನ್ನು ನಿರ್ದೇಶಕರು ಗೌಪ್ಯವಾಗಿಟ್ಟಿದ್ದಾರೆ. ಒಟ್ಟಿನಲ್ಲಿ ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿರುವ ಈ ಚಿತ್ರದ ಚಿತ್ರೀಕರಣ ಹಾಗೂ ನಂತರದ ಚಟುವಟಿಕೆಗಳು ಪೂರ್ಣವಾಗಿದ್ದು, ಬಿಡುಗಡೆ ಹಂತಕ್ಕೆ ಹತ್ತಿರವಾಗುತ್ತಿದೆ.

ನಿರ್ಮಾಪಕ ಟಿ.ಆರ್.ಮಂಜುನಾಥ್ ರಾಯರ ಸನ್ನಿಧಿಯಲ್ಲೇ ಈ ಚಿತ್ರ ಆರಂಭ ಮಾಡಿದ್ದರು. ಈಗ ಅಂದುಕೊಂಡ ಹಾಗೆ ಚಿತ್ರ ಪೂರ್ಣವಾಗಿರುವುದು ರಾಯರ ಕರುಣೆಯಿಂದಲೆ ಎನ್ನುತ್ತಾರೆ ನಿರ್ಮಾಪಕ ಹಾಗೂ ನಿರ್ದೇಶಕ ಟಿ.ಆರ್.ಮಂಜುನಾಥ್. ನಿರ್ದೇಶಕರೆ ಅವರೆ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ.

ನಿತ್ಯಾ ಮೆನನ್ ನಿರ್ಮಾಣ, ಅಭಿನಯದ ಸಿನಿಮಾ ಘೋಷಣೆ

'ಲಿಯೋ ವಿಷನ್' ತನ್ನ ಐದನೇ ಸಿನಿಮಾವನ್ನು ಅಧಿಕೃತವಾಗಿ ಘೋಷಿಸಿದೆ. ಈ ವಿಶೇಷ ಚಿತ್ರದ ಮೂಲಕ ಬಹುಭಾಷಾ ನಟಿ ನಿತ್ಯಾ ಮೆನನ್ ಅವರು ತಮ್ಮ 'ಕೇಯೂರಿ ಪ್ರೊಡಕ್ಷನ್ಸ್ ಪ್ರೈವೇಟ್ ಲಿಮಿಟೆಡ್' ಬ್ಯಾನರ್ ಅಡಿಯಲ್ಲಿ ಸಹ–ನಿರ್ಮಾಪಕಿಯಾಗಿ ಕೈಜೋಡಿಸಿದ್ದಾರೆ.

ಕಾಮಿಡಿ ಕಥಾಹಂದರ ಹೊಂದಿರುವ ಈ ವಿಶಿಷ್ಟ ಚಿತ್ರದಲ್ಲಿ ನಿತ್ಯಾ ಮೆನನ್ ಮುಖ್ಯ ಭೂಮಿಕೆಯಲ್ಲಿ ಅಭಿನಯಿಸುತ್ತಿದ್ದಾರೆ. 'ಡಿ ಕೆ' ಈ ಚಿತ್ರವನ್ನು ನಿರ್ದೇಶಿಸ

ಈ ಸಿನಿಮಾಕನ್ನಡ, ತಮಿಳು, ತೆಲುಗು, ಮಲಯಾಳಂ ಮತ್ತು ಹಿಂದಿ ಭಾಷೆಗಳಲ್ಲಿ ತೆರೆಗೆ ಬರಲಿದೆ.

ಟೇಕ್ ಆಫ್ ಗೆ ಬಿಗ್ ಬಾಸ್ ಸಜ್ಜು!! ರಾಜ್ಯದೆಲ್ಲೆಡೆ ಈಗ ಬಿಗ್ ಬಾಸ್ ಜ್ವರ!!

ಕಾತರದಿಂದ ಕಾಯುತ್ತಿರುವ ಸೀಸನ್ 13ರಲ್ಲಿ ದೊಡ್ಮನೆಗೆ ಯಾರು ಎಂಟ್ರಿ ಕೊಡಲಿದ್ದಾರೆ ಯಾವ ಸೆಲೆಬ್ರಿಟಿಗಳು ಮನೆ ಸೇರಲಿದ್ದಾರೆ ಎಂಬ ಕುತೂಹಲ ಎಲ್ಲೆಡೆ ಇದೆ..

ಬಿಗ್ ಬಾಸ್ ಕನ್ನಡ ಸೀಸನ್ 13 ಸೆಪ್ಟೆಂಬರ್ 6ರಿಂದ Colors Kannada ಮತ್ತು JioHotstarನಲ್ಲಿ ರಾತ್ರಿ 7:00 ಗಂಟೆಗೆ ಆರಂಭವಾಗಲಿದೆ.

ಬಿಗ್ ಬಾಸ್ ಜನಪ್ರಿಯತೆಗೆ ನಟ ಕಿಚ್ಚ ಸುದೀಪ ರ ವಿಶಿಷ್ಟ ನಿರೂಪಣಾ ಶೈಲಿ, ಧ್ವನಿ, ಸ್ಪರ್ಧಿಗಳೊಂದಿಗೆ ಅವರ ಸಂವಹನ ಕಾರ್ಯಕ್ರಮದ ಪ್ರಮುಖ ಆಕರ್ಷಣೆಗಳು.

ಈ ಬಾರಿ Flight ಎಂಬ ವಿಭಿನ್ನ ಹಾಗೂ ರೋಚಕ ಥೀಮ್‌ನೊಂದಿಗೆ ಹೊಸ ಪ್ರಯತ್ನಕ್ಕೆ ಮುಂದಾಗಿದೆ. ಸೆಲೆಬ್ರಿಟಿ ಸ್ಪರ್ಧಿಗಳ ಜೊತೆಗೆ ಸಾಮಾನ್ಯ ಜನರನ್ನೂ ಒಂದೇ ವೇದಿಕೆಗೆ ಕರೆತರುವ ಮೂಲಕ, ಪ್ರತಿಯೊಬ್ಬ ಸ್ಪರ್ಧಿಯೂ ತನ್ನದೇ ಆದ ಕಥೆಯನ್ನು ಹೊಂದಿರುವ ಹಾಗೂ ಪ್ರತಿಯೊಂದು ಕ್ಷಣವೂ ಆಟದ ದಿಕ್ಕನ್ನೇ ಬದಲಾಯಿಸಬಹುದಾದಂತಸೀಸನ್ ಇದಾಗಿದೆ.

ಇನ್ನು ಮುಂದೆ ಪ್ರೇಕ್ಷಕರು ಬಿಗ್ ಬಾಸ್ ಮನೆಯ ಪ್ರತಿಯೊಂದು ಕ್ಷಣವನ್ನೂ ನೋಡಬಹುದು.

ಬಿಗ್ ಬಾಸ್ ಕನ್ನಡ ಸೀಸನ್ 13 ಈಗ JioHotstarನಲ್ಲಿ 24x7 ಲಭ್ಯವಿದ್ದು, ಟಿವಿ ಎಪಿಸೋಡ್‌ಗಳನ್ನು ಮೀರಿ ಮನೆಯೊಳಗಿನ ಪ್ರತಿಯೊಂದು ಬೆಳವಣಿಗೆಯನ್ನೂ ವೀಕ್ಷಿಸುವ ಅವಕಾಶ ಸಿಗಲಿದೆ. ಕ್ಯಾಂಡಿಡ್ ಮಾತುಕತೆಗಳು, ಅನಿರೀಕ್ಷಿತ ಕ್ಷಣಗಳು, ಬದಲಾಗುವ ಸಂಬಂಧಗಳು, ಭರಪೂರ ಡ್ರಾಮಾ ಸಿಗಲಿದೆ. ಬಿಗ್ ಬಾಸ್ ಮನೆಯ ರೋಚಕ ಕ್ಷಣಗಳನ್ನು ಯಾವಾಗ ಬೇಕಾದರಲ್ಲಿ ಲಭ್ಯ.

"ಅಕ್ಕ – ಚಿತ್ರೋತ್ಸವ" ಪ್ರಶಸ್ತಿ ಸಮಾರಂಭ

"ಅಕ್ಕ ಸಿನಿಗನ್ನಡ ಚಲನಚಿತ್ರೋತ್ಸವ" ಆಯೋಜಿಸಲಾಗಿದೆ. ಸೆಪ್ಟೆಂಬರ್ ನಲ್ಲಿ ನಡೆಯುವ ಅಕ್ಕ ಸಮ್ಮೇಳನದಲ್ಲಿ ಈ ಬಾರಿ ಆಯ್ಕೆಯಾಗಿರುವ ಹತ್ತು ಚಿತ್ರಗಳು ಪ್ರದರ್ಶನವಾಗಿಲಿದೆ. ಅದಕ್ಕೂ ಪೂರ್ವಭಾವಿಯಾಗಿ ಬೆಂಗಳೂರಿನಲ್ಲಿ ಇತ್ತೀಚೆಗೆ ಚಲನಚಿತ್ರೋತ್ಸವಕ್ಕೆ ಆಯ್ಕೆಯಾಗಿರುವ ಚಿತ್ರಗಳ ಪ್ರಶಸ್ತಿ ಪ್ರದಾನ ಸಮಾರಂಭ ನೆರವೇರಿತು.

ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆಜಯಮಾಲಾ, ನಟ ನಿರೂಪ್ ಭಂಡಾರಿ, ಅಕ್ಕ ಸಮ್ಮೇಳನದ ನಿರ್ದೇಶಕರಾದ ಯಮುನ ಹಾಗೂ ತಿಮ್ಮಪ್ಪಗೌಡ ಸೇರಿದಂತೆ ಅನೇಕ ಗಣ್ಯರು ಸಮಾರಂಭಕ್ಕೆ ಆಗಮಿಸಿ ಪ್ರಶಸ್ತಿ ವಿತರಣೆ ಮಾಡಿದರು. ಚಲನಚಿತ್ರೋತ್ಸವದ ನಿರ್ದೇಶಕರಾದ ಪಿ.ಶೇಷಾದ್ರಿ ಹಾಗೂ ಸಂಘಟಕರಾದ ಗೌರೀಶ್ ಅಕ್ಕಿ, ದೇವೇಂದ್ರ ಬಡಿಗೇರ್, ಅನೇಕ ಪ್ರಾಯೋಜಕರು, ತೀರ್ಪುಗಾರರು, ಪ್ರಶಸ್ತಿ ಪುರಸ್ಕೃತರು ಮತ್ತು ಮಾರ್ಕೆಟಿಂಗ್ ಮುಖ್ಯಸ್ಥರಾದ ಕಂದಯ್ಯ ಶೆಟ್ಟಿ ಸಮಾರಂಭದಲ್ಲಿ ಉಪಸ್ಥಿತರಿದ್ದರು.

"ಅಕ್ಕ ಸಿನಿಗನ್ನಡ ಚಲನಚಿತ್ರೋತ್ಸವ" ಆರಂಭವಾಗಿದ್ದು ಹೇಗೆ ಎಂದು ಸಂಘಟಕರಾದ ಗೌರೀಶ್ ಅಕ್ಕಿ ಹಾಗೂ ದೇವೇಂದ್ರ ಬಡಿಗೇರ್ ತಿಳಿಸಿದರು.

"ಅಕ್ಕ ಸಿನಿಗನ್ನಡ ಚಲನಚ